Bapuji Educational Association (Regd.)

INSTITUTION'S INNOVATION COUNCIL (Ministry of HRD Initiative)

# BAPUJI INSTITUTE OF ENGINEERING & TECHNOLOGY

DAVANGERE – 577 004, KARNATAKA.

in association with

## ISRO-U R Rao Satellite Centre, Bengaluru

Cordially invites you for the

# World Space Week-2023

Celebration

## "SPACE & ENTREPRENEURSHIP" (Theme 2023)

***Chief Guests :***

**Sri Ramanagouda V Nadagouda**

Deputy Director, Integration and Checkout Area,
U R Rao Satellite Centre, Bengaluru-17

**Prof. Y. Vrushabhendrappa**

Director, BIET

***Presence:***

**Dr. Raghavendra B Kulkarni**

Chairperson, WSW-2023,URSC, ISRO

**Sri. B Kotresh**

DDPI, Davangere

**Dr. H.B. Aravind**

Principal, BIET

**Saturday, 7th October 2023 | 09.15 a.m. to 4.00 p.m.**

**Venue : S.S. Mallikarjun Cultural Centre, BIET, Davangere**

*All Are Cordially Invited*

**Space Exhibition, Technical Talks, Competitions**

janathavani 06-10-2023

# ಬಿಐಇಟಿಯಲ್ಲಿ ನಾಳೆ ವಿಶ್ವ ಅಂತರಿಕ್ಷ ಸಪ್ತಾಹ

BIET LIBRARY

ದಾವಣಗೆರೆ, ಅ.5- ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಹಾಗೂ ಇಸ್ರೋದ ಅಂಗ ಸಂಸ್ಥೆ ಯು.ಆರ್. ರಾವ್ ಸೆಟಲೈಟ್ ಸೆಂಟರ್ ಸಹಭಾಗಿತ್ವದಲ್ಲಿ ವಿಶ್ವ ಅಂತರಿಕ್ಷ ಸಪ್ತಾಹವನ್ನು ನಾಡಿದ್ದು ದಿನಾಂಕ 7ರಿಂದ ನಗರದ ಬಿಐಇಟಿ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ತಿಳಿಸಿದ್ದಾರೆ.

ಗುರುವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಬಾಹ್ಯಾಕಾಶದ ಕುರಿತು ಅರಿವು ಮೂಡಿಸಲು ಈ ಸಪ್ತಾಹ ಆಚರಿಸಲಾಗುತ್ತಿದೆ. 'ಆಕಾಶ ಹಾಗೂ ವ್ಯವಹಾರ' ಈ ವರ್ಷದ ಸಪ್ತಾಹದ ಥೀಮ್ ಆಗಿದೆ ಎಂದು ಹೇಳಿದರು.

ಕಾಲೇಜು ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ ಸಭಾಂಗಣದಲ್ಲಿ ನಾಡಿದ್ದು ದಿನಾಂಕ 7ರಂದು ಬೆಳಿಗ್ಗೆ 9.15 ಗಂಟೆಗೆ ನಡೆಯುವ ಉದ್ಘಾಟನಾ ಕಾರ್ಯಕ್ರಮದಲ್ಲಿ ಯು.ಆರ್. ರಾವ್ ಉಪಗ್ರಹ ಕೇಂದ್ರದ ನಿರ್ದೇಶಕ ರಾಮನಗೌಡ ವೆಂಕನಗೌಡ ನಾಡಗೌಡ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಡಾ.ರಾಘವೇಂದ್ರ ಬಿ. ಕುಲಕರ್ಣಿ, ಡಿಡಿಪಿಐ ಜಿ.ಕೊಟ್ರೇಶ್, ಬಿಐಇಟಿ ಪ್ರಾಂಶುಪಾಲ ಡಾ.ಹೆಚ್.ಬಿ. ಅರವಿಂದ್ ಉಪಸ್ಥಿತರಿರಲಿದ್ದಾರೆ.

ಸಮಾರಂಭದ ಅಂಗವಾಗಿ ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ, ಆಶುಭಾಷಣ ಸ್ಪರ್ಧೆ ಹಾಗೂ ಸ್ಮರಣ ಶಕ್ತಿ ಪರೀಕ್ಷಾ ಸ್ಪರ್ಧೆಗಳನ್ನು ಇಸ್ರೋದ ಯು.ಆರ್.ರಾವ್ ಸೆಟಲೈಟ್ ಸೆಂಟರ್ ವಿಜ್ಞಾನಿಗಳು ಆಯೋಜಿಸಿದ್ದು, ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ.

ಮಕ್ಕಳಲ್ಲಿ ಅಂತರಿಕ್ಷ ವಿಜ್ಞಾನ ಮತ್ತು ದೇಶೀ ತಂತ್ರಜ್ಞಾನಗಳ ಮೇಲಿನ ಆಸಕ್ತಿ ಹೆಚ್ಚಿಸಲು ಇಸ್ರೋದ ಕೃತಕ ಉಪಗ್ರಹಗಳು, ಉಡಾವಣೆ ಯಂತ್ರಗಳು ಹಾಗೂ ಬಾಹ್ಯಾಕಾಶ ಉಪಕರಣಗಳ ವಸ್ತು ಪ್ರದರ್ಶನವನ್ನೂ ಆಯೋಜಿಸಲಾಗಿದೆ. ಕಾರ್ಯಕ್ರಮ ವೀಕ್ಷಿಸಲು ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಳ್ಳಬೇಕಿದೆ, ಮಾಹಿತಿಗಾಗಿ ಡಾ.ಸಂತೋಷ್ ಕುಮಾರ್ (8073286089) ಗೆ ಅವರನ್ನು ಸಂಪರ್ಕಿಸಬಹುದು.

ಪ್ರವೀಣ್ ಕುಮಾರ್, ಸಿ.ಎಂ. ಕಲ್ಲೇಶಪ್ಪ, ಜಿ.ಪಿ. ದೇಸಾಯಿ, ಶ್ರೀನಿಧಿ ಕುಲಕರ್ಣಿ, ಸಂತೋಷ್ ಕುಮಾರ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## 9 ವಿಭಾಗಗಳಿಗೂ ಎನ್‌ಬಿಎ ಮಾನ್ಯತೆ: ಅರವಿಂದ್

2023-24ನೇ ಸಾಲಿನಲ್ಲಿ ಬಿಐಇಟಿ ಕಾಲೇಜಿನಲ್ಲಿ 1005 ವಿದ್ಯಾರ್ಥಿಗಳು ಬಿಇ ಅಧ್ಯಯನಕ್ಕೆ ದಾಖಲಾಗಿದ್ದು, ಕಾಲೇಜಿನ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲಾಗಿದೆ ಎಂದು ಪ್ರಾಂಶುಪಾಲ ಡಾ.ಹೆಚ್.ಬಿ. ಅರವಿಂದ್ ಹೇಳಿದರು.

ಪ್ರಸ್ತುತ ವರ್ಷ ನವದೆಹಲಿಯ ರಾಷ್ಟ್ರೀಯ ಮಾನ್ಯತಾ ಮಂಡಳಿ (NBA) ನಾಲ್ಕು ವಿಭಾಗಗಳನ್ನು ಮಾನ್ಯತೆ ಮಾಡಿದ್ದು, ಇದರೊಂದಿಗೆ ಕಾಲೇಜಿನ 9 ವಿಭಾಗಗಳಿಗೂ ಮಾನ್ಯತೆ ದೊರೆತಂತಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

# ಬಿಐಇಟಿಯಲ್ಲಿ ವಿಶ್ವ ಅಂತರಿಕ್ಷ ಸಪ್ತಾಹ
# ಮಕ್ಕಳಿಗೆ ರಸಪ್ರಶ್ನೆ, ಸ್ಮರಣ ಶಕ್ತಿ ಪರೀಕ್ಷೆ

Nagaravani 06-10-2023 BIET LIBRARY




ದಾ.ನಗರವಾಣಿ ಸುದ್ದಿ

ದಾವಣಗೆರೆ.ಅ.5: ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಹಾಗೂ ಇಸ್ರೋದ ಅಂಗಸಂಸ್ಥೆಯಾದ ಯು.ಆರ್.ರಾವ್ ಸೆಟಲೈಟ್ ಸೆಂಟರ್ ಸಹಭಾಗಿತ್ವದಲ್ಲಿ ಅ.7 ರಂದು ನಗರದ ಬಿಐಇಟಿ ಕಾಲೇಜಿನ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ವಿಶ್ವ ಅಂತರಿಕ್ಷ ಸಪ್ತಾಹವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಹೆಚ್.ಬಿ.ಅರವಿಂದ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.15ಕ್ಕೆ ಮುಖ್ಯ ಅತಿಥಿಗಳಾಗಿ ಯು. ಆರ್. ರಾವ್ ಉಪಗ್ರಹ ಕೇಂದ್ರದ ಉಪಗ್ರಹ ಏಕೀಕರಣ ಹಾಗೂ ಪರೀಕ್ಷಣಾ ವಿಭಾಗದ ಉಪ ನಿರ್ದೇಶಕ ರಾಮನಗೌಡ ವೆಂಕನಗೌಡ ನಾಡಗೌಡ, ಬಿಐಇಟಿ ನಿರ್ದೇಶಕ ಪ್ರೊ.ವೈ.ವೃಷಬೇಂದ್ರಪ್ಪ ಆಗಮಿಸಲಿದ್ದಾರೆ. ಇಸ್ರೊದ ಯುಆರ್‌ಎಸ್‌ಸಿ ಅಧ್ಯಕ್ಷ ಡಾ||ರಾಘವೇಂದ್ರ ಬಿ.ಕುಲಕರ್ಣಿ, ಡಿಡಿಪಿಐ ಬಿ.ಕೊಟ್ರೇಶ್ ಉಪಸ್ಥಿತರಿರುವರು ಎಂದು ಹೇಳಿದರು.

ವಿಶ್ವ ಅಂತರಿಕ್ಷ ಸಪ್ತಾಹವನ್ನು ಸಾಮಾನ್ಯವಾಗಿ ಅಕ್ಟೋಬರ್ 4 ರಿಂದ 10ರ ವರೆಗೆ ಒಂದು ವಾರಗಳ ಕಾಲ ಆಚರಿಸಲಾಗುತ್ತದೆ. ಇದು ವಿಶ್ವದ ಅತಿ ದೊಡ್ಡ ಬಾಹ್ಯಕಾಶ ಕಾರ್ಯಕ್ರಮವಾಗಿದ್ದು, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಆಚರಿಸಲು ಹಾಗೂ ಅಂತರಾಷ್ಟ್ರೀಯ ಸಹಕಾರ ನಿರ್ಮಿಸಲು ಸಪ್ತಾಹವು ಒಂದು ಉತ್ತಮ ವೇದಿಕೆಯಾಗಿದೆ. ಅಂತರಿಕ್ಷ ಮತ್ತು ಉದ್ಯಮಶೀಲತೆ ಎಂಬುದು ಈ ವರ್ಷದ ವಿಷಯ ವಸ್ತುವಾಗಿದೆ ಎಂದರು.

ಶಾಲಾ ಕಾಲೇಜು ಮಕ್ಕಳಲ್ಲಿ ಹಾಗೂ ಯುವ ಜನತೆಯಲ್ಲಿ ಬಾಹ್ಯಕಾಶದ ಮೇಲಿನ ಆಸಕ್ತಿ ಮತ್ತು ಅನ್ವೇಷಣೆಯನ್ನು ಉತ್ತೇಜಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ಎಲ್ಲಾ ಪ್ರೌಢಶಾಲಾ ಮತ್ತು ಕಾಲೇಜು ಮಕ್ಕಳಿಗೆ ರಸಪ್ರಶ್ನೆ ಕಾರ್ಯಕ್ರಮ, ಆಶುಭಾಷಣ ಸ್ಪರ್ಧೆ ಹಾಗೂ ಸ್ಮರಣ ಶಕ್ತಿ ಪರೀಕ್ಷೆ ಸ್ಪರ್ಧೆಗಳನ್ನು ಇಸ್ರೋದ ಯು.ಆರ್.ರಾವ್ ಸೆಟಲೈಟ್ ಸೆಂಟರ್ ವಿಜ್ಞಾನಿಗಳು ಆಯೋಜಿಸಿದ್ದಾರೆ. ಈ ಎಲ್ಲಾ ಸ್ಪರ್ಧೆಗಳ ವಿಜೇತರುಗಳಿಗೆ ಯು.ಆರ್.ರಾವ್ ಉಪಗ್ರಹ ಕೇಂದ್ರ, ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆಯವರು ಬಹುಮಾನ ವಿತರಿಸಲಿದ್ದಾರೆ ಎಂದು ಹೇಳಿದರು.

ಮಕ್ಕಳಲ್ಲಿ ಅಂತರಿಕ್ಷ ವಿಜ್ಞಾನ ಮತ್ತು ದೇಶಿಯ ತಂತ್ರಜ್ಞಾನಗಳ ಮೇಲಿನ ಆಸಕ್ತಿಯನ್ನು ಹೆಚ್ಚಿಸುವ ಸಲುವಾಗಿ ಇಸ್ರೋದ ಕೃತಕ ಉಪಗ್ರಹಗಳು, ಉಡಾವಣೆ ಯಂತ್ರಗಳು ಮತ್ತು ಬಾಹ್ಯಾಕಾಶ ಉಪಕರಣಗಳ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿದೆ. ಆದುದರಿಂದ ಎಲ್ಲಾ ಶಾಲೆಗಳ ಶಿಕ್ಷಕರು ತಮ್ಮ ವಿದ್ಯಾರ್ಥಿಗಳೊಂದಿಗೆ ಈ ಕಾರ್ಯಕ್ರಮ ವೀಕ್ಷಿಸಲು ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸಲು ತಮ್ಮ ಶಾಲೆಯ ವಿದ್ಯಾರ್ಥಿಗಳು ಹೆಸರುಗಳನ್ನು ನೊಂದಾಯಿಸಿಕೊಳ್ಳಬೇಕಾಗಿ ತಿಳಿಸಿದರು.

ಬಿಐಇಟಿ ನಿರ್ದೇಶಕ ಪ್ರೊ.ವೈ.ವೃಷಬೇಂದ್ರಪ್ಪ ಮಾತನಾಡಿ, 2023–24ರ ಸಾಲಿನಲ್ಲಿ ಬಿ.ಐ.ಇ.ಟಿ ಕಾಲೇಜಿನಲ್ಲಿ 1005 ವಿದ್ಯಾರ್ಥಿಗಳು ಬಿ.ಇ. ಅಧ್ಯಯನಕ್ಕೆ ದಾಖಲಾಗಿದ್ದು, ಕಾಲೇಜಿನ ಇತಿಹಾಸದಲ್ಲಿ ಇದೊಂದು ಮೈಲುಗಲ್ಲಾಗಿದೆ. ಹಾಗೂ ಪ್ರಸ್ತುತ ವರ್ಷ ನವದೆಹಲಿಯ ರಾಷ್ಟ್ರೀಯ ಮಾನ್ಯತಾ ಮಂಡಳಿಯು ಟೆಕ್ಸ್ಟೈಲ್, ಕೆಮಿಕಲ್, ಬಯೋ ಕೆಮಿಕಲ್, ಇನ್‌ಸ್ಟ್ರುಮೆಂಟೇಶನ್ ವಿಭಾಗಗಳನ್ನು ಮಾನ್ಯತೆ ಮಾಡಿದ್ದು ಇದರೊಂದಿಗೆ ಕಾಲೇಜಿನ ಒಟ್ಟು ಒಂಬತ್ತು ವಿಭಾಗಗಳಿಗೆ ಎನ್‌ಬಿಎ ಮಾನ್ಯತೆ ದೊರೆತಂತಾಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ, ಬಿಐಇಟಿಯ ಡಿ.ಜಿ.ಪ್ರವೀಣ್ ಕುಮಾರ್, ಸಿ.ಎಂ.ಕಲ್ಲೇಶಪ್ಪ, ಕುಲಕರ್ಣಿ, ಜಿ.ಪಿ. ದೇಸಾಯಿ, ಸಂತೋಷ್ ಕುಮಾರ್ ಇನ್ನಿತರು ಉಪಸ್ಥಿತರಿದ್ದರು.

BIET LIBRARY

# ವಿಶ್ವ ಅಂತರಿಕ್ಷ ಸಪ್ತಾಹ ನಾಳೆಯಿಂದ

vijayakarnataka 06-10-2023

■ **ವಿಕ ಸುದ್ದಿಲೋಕ** ದಾವಣಗೆರೆ

ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಹಾಗೂ ಇಸ್ರೋದ ಅಂಗಸಂಸ್ಥೆ ಯು.ಆರ್. ರಾವ್ ಸ್ಯಾಟ್‌ಲೈಟ್ ಸೆಂಟರ್ ಸಹಯೋಗದಲ್ಲಿ ಅ.7ರಂದು ನಗರದ ಬಿಐಇಟಿ ಕಾಲೇಜಿನಲ್ಲಿ ವಿಶ್ವ ಅಂತರಿಕ್ಷ ಸಪ್ತಾಹ ಏರ್ಪಡಿಸಲಾಗಿದೆ ಎಂದು ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಬಾಹ್ಯಾಕಾಶದ ಕುರಿತು ಅರಿವು ಮೂಡಿಸಲಿಕ್ಕಾಗಿ ಈ ಸಪ್ತಾಹ ಆಯೋಜಿಸಲಾಗಿದೆ. 'ಆಕಾಶ ಹಾಗೂ ವ್ಯವಹಾರ' ಈ ವರ್ಷದ ಥೀಮ್ ಆಗಿದೆ. ಅ.7ರಂದು ಬೆಳಗ್ಗೆ 9.15ಕ್ಕೆ ಬಿಐಇಟಿ ಆವರಣದ ಎಸ್. ಎಸ್. ಮಲ್ಲಿಕಾರ್ಜುನ ಸಭಾಂಗಣದಲ್ಲಿ ನಡೆಯುವ ಸಪ್ತಾಹದ ಉದ್ಘಾಟನಾ ಸಮಾರಂಭದಲ್ಲಿ ಯು.ಆರ್.ರಾವ್ ಉಪಗ್ರಹ ಕೇಂದ್ರದ ನಿರ್ದೇಶಕ ರಾಮನಗೌಡ ವೆಂಕನಗೌಡ ನಾಡಗೌಡ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಡಾ.ರಾಘವೇಂದ್ರ ಬಿ. ಕುಲಕರ್ಣಿ, ಡಿಡಿಪಿಐ ಬಿ. ಕೊಟ್ರೇಶ್, ಬಿಐಇಟಿ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ್ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಈ ಸಪ್ತಾಹದ ಅಂಗವಾಗಿ ಇಸ್ರೋದ ಯು.ಆರ್.ರಾವ್ ಸೆಟಲೈಟ್ ಸೆಂಟರ್ ವಿಜ್ಞಾನಿಗಳು ಜಿಲ್ಲೆಯ ಸರಕಾರಿ, ಅನುದಾನಿತ ಹಾಗೂ ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ, ಆಶುಭಾಷಣ ಸ್ಪರ್ಧೆ ಹಾಗೂ ಸ್ಮರಣ ಶಕ್ತಿ ಪರೀಕ್ಷೆ ಸ್ಪರ್ಧೆ ಆಯೋಜಿಸಲಿದ್ದಾರೆ. ವಿಜೇತರಿಗೆ ಬಹುಮಾನ ವಿತರಿಸಲಾಗುವುದು. ಮಕ್ಕಳಲ್ಲಿ ಅಂತರಿಕ್ಷ ವಿಜ್ಞಾನ ಮತ್ತು ದೇಶೀ ತಂತ್ರಜ್ಞಾನಗಳ ಮೇಲಿನ ಆಸಕ್ತಿ ಹೆಚ್ಚಿಸಲು ಇಸ್ರೋದ ಕೃತಕ ಉಪಗ್ರಹಗಳು, ಉಡಾವಣೆ ಯಂತ್ರಗಳು ಹಾಗೂ ಬಾಹ್ಯಾಕಾಶ ಉಪಕರಣಗಳ ವಸ್ತು ಪ್ರದರ್ಶನ ಸಹ ಏರ್ಪಡಿಸಲಾಗಿದೆ. ಕಾರ್ಯಕ್ರಮ ವೀಕ್ಷಿಸಲು ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಳ್ಳಬೇಕಾಗಿದೆ. ಮಾಹಿತಿಗಾಗಿ ಡಾ.ಸಂತೋಷ್ ಕುಮಾರ್ (ಮೋ: 8073286089) ಸಂಪರ್ಕಿಸಬೇಕು'' ಎಂದು ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಎಚ್. ಬಿ. ಅರವಿಂದ್ ಮಾತನಾಡಿ, ''2023-24ನೇ ಸಾಲಿನಲ್ಲಿ ನಮ್ಮ ಕಾಲೇಜಿಗೆ 1005 ವಿದ್ಯಾರ್ಥಿಗಳು ಬಿಇ ಕೋರ್ಸ್‌ಗೆ ದಾಖಲಾಗಿದ್ದಾರೆ. ಕಾಲೇಜಿನ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲಾಗಿದೆ. ಪ್ರಸ್ತುತ ವರ್ಷ ನವದೆಹಲಿಯ ರಾಷ್ಟ್ರೀಯ ಮಾನ್ಯತಾ ಮಂಡಳಿ ನಾಲ್ಕು ವಿಭಾಗಗಳನ್ನು ಮಾನ್ಯತೆ ಮಾಡಿದೆ. ಇದರೊಂದಿಗೆ ಕಾಲೇಜಿನ 9 ವಿಭಾಗಗಳಿಗೂ ಮಾನ್ಯತೆ ದೊರೆತಂತಾಗಿದೆ'' ಎಂದು ಹೇಳಿದರು.

ಗೋಷ್ಠಿಯಲ್ಲಿ ಕಾಲೇಜಿನ ಪ್ರವೀಣ್ ಕುಮಾರ್, ಸಿ.ಎಂ. ಕಲ್ಲೇಶಪ್ಪ, ಜಿ.ಪಿ. ದೇಸಾಯಿ, ಶ್ರೀನಿಧಿ ಕುಲಕರ್ಣಿ, ಸಂತೋಷ್ ಕುಮಾರ್ ಮತ್ತಿತರರಿದ್ದರು.

BIET LIBRARY

# ಬಿಐಇಟಿಯಲ್ಲಿ ವಿಶ್ವ ಅಂತರಿಕ್ಷ ಸಪ್ತಾಹ

Samyukta karnataka 06-10-2023

ದಾವಣಗೆರೆ: ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಹಾಗೂ ಇಸ್ರೋದ ಅಂಗ ಸಂಸ್ಥೆ ಯು.ಆರ್.ರಾವ್ ಸೆಟಲೈಟ್ ಸೆಂಟರ್ ಸಹಯೋಗದಲ್ಲಿ ವಿಶ್ವ ಅಂತರಿಕ್ಷ ಸಪ್ತಾಹ ಅ.7ರಿಂದ ಬಿಐಇಟಿ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬಿಐಇಟಿ ನಿರ್ದೇಶಕ ಪ್ರೊ.ವೃಷಭೇಂದ್ರಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಬಾಹ್ಯಾಕಾಶದ ಕುರಿತು ಅರಿವು ಮೂಡಿಸಲು ಈ ಸಪ್ತಾಹ ಆಚರಿಸಲಾಗುತ್ತಿದೆ ಎಂದರು.

ಅ.7ರ ಬೆಳಗ್ಗೆ 9.15 ಗಂಟೆಗೆ ಕಾಲೇಜು ಆವರಣದಲ್ಲಿರುವ ಎಸ್.ಎಸ್. ಮಲ್ಲಿಕಾರ್ಜುನ ಸಭಾಂಗಣದಲ್ಲಿ ಉದ್ಘಾಟನಾ ಕಾರ್ಯಕ್ರಮ ನಡೆಯಲಿದ್ದು, ಯು.ಆರ್. ರಾವ್ ಉಪಗ್ರಹ ಕೇಂದ್ರದ ನಿರ್ದೇಶಕ ರಾಮನಗೌಡ ವೆಂಕನಗೌಡ ನಾಡಗೌಡ ಆಗಮಿಸಲಿದ್ದಾರೆ. ಡಾ.ರಾಘವೇಂದ್ರ ಬಿ. ಕುಲಕರ್ಣಿ, ಡಿಡಿಪಿಐ ಬಿ.ಕೊಟ್ರೇಶ್, ಬಿಐಇಟಿ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ್ ಭಾಗವಹಿಸಲಿದ್ದಾರೆ.

ಮಕ್ಕಳಲ್ಲಿ ಅಂತರಿಕ್ಷ ವಿಜ್ಞಾನ ಮತ್ತು ದೇಶೀ ತಂತ್ರಜ್ಞಾನಗಳ ಮೇಲಿನ ಆಸಕ್ತಿ ಹೆಚ್ಚಿಸಲು ಇಸ್ರೋದ ಕೃತಕ ಉಪಗ್ರಹಗಳು, ಉಡಾವಣೆ ಯಂತ್ರಗಳು ಹಾಗೂ ಬಾಹ್ಯಾಕಾಶ ಉಪಕರಣಗಳ ವಸ್ತು ಪ್ರದರ್ಶನವನ್ನೂ ಆಯೋಜಿಸಲಾಗಿದೆ. ಕಾರ್ಯಕ್ರಮ ವೀಕ್ಷಿಸಲು ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಳ್ಳಬೇಕಿದೆ, ಮಾಹಿತಿಗಾಗಿ ಡಾ.ಸಂತೋಷ್ ಕುಮಾರ್(8073286089) ದೂರವಾಣಿ ಸಂಪರ್ಕಿಸಬಹುದು ಎಂದರು.

ಬಿಐಇಟಿ ಪ್ರಾಂಶುಪಾಲ ಡಾ.ಎಚ್.ಬಿ. ಅರವಿಂದ್ ಮಾತನಾಡಿ, 2023–24ನೇ ಸಾಲಿನಲ್ಲಿ ಬಿಐಇಟಿ ಕಾಲೇಜಿನಲ್ಲಿ 1005 ವಿದ್ಯಾರ್ಥಿಗಳು ಬಿಇ ಅಧ್ಯಯನಕ್ಕೆ ದಾಖಲಾಗಿದ್ದು, ಕಾಲೇಜಿನ ಇತಿಹಾಸದಲ್ಲಿ ಇದೊಂದು ಮೈಲುಗಲ್ಲು. ಪ್ರಸ್ತುತ ವರ್ಷ ನವದೆಹಲಿಯ ರಾಷ್ಟ್ರೀಯ ಮಾನ್ಯತಾ ಮಂಡಳಿ ನಾಲ್ಕು ವಿಭಾಗಗಳನ್ನು ಮಾನ್ಯತೆ ಮಾಡಿದ್ದು, ಇದರೊಂದಿಗೆ ಕಾಲೇಜಿನ 9 ವಿಭಾಗಗಳಿಗೂ ಮಾನ್ಯತೆ ದೊರೆತಂತಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಗೋಷ್ಠಿಯಲ್ಲಿ ಪ್ರವೀಣ್‌ಕುಮಾರ್, ಸಿಎಂ. ಕಲ್ಲೇಶಪ್ಪ, ಜಿ.ಪಿ. ದೇಸಾಯಿ, ಶ್ರೀನಿಧಿ ಕುಲಕರ್ಣಿ, ಸಂತೋಷ್ ಕುಮಾರ್ ಇದ್ದರು.



BIET LIBRARY

# ‘ವಿಶ್ವ ಅಂತರಿಕ್ಷ ಸಪ್ತಾಹ’ ನಾಳೆ

Prajavani 06-10-2023

ದಾವಣಗೆರೆ: ಇಲ್ಲಿನ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ (ಬಿಐಇಟಿ) ಹಾಗೂ ಇಸ್ರೋದ ಅಂಗ ಸಂಸ್ಥೆಯಾದ ಯು.ಆರ್. ರಾವ್ ಉಪಗ್ರಹ ಕೇಂದ್ರದ ಸಹಯೋಗದಲ್ಲಿ ಅಕ್ಟೋಬರ್ 7ರಿಂದ ‘ವಿಶ್ವ ಅಂತರಿಕ್ಷ ಸಪ್ತಾಹ’ವನ್ನು ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ತಿಳಿಸಿದರು.

ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಲ್ಲಿ ಬಾಹ್ಯಾಕಾಶದ ಕುರಿತು ಅರಿವು ಮೂಡಿಸಲು ಈ ಸಪ್ತಾಹ ಆಚರಿಸಲಾಗುತ್ತಿದೆ. ‘ಆಕಾಶ ಹಾಗೂ ವ್ಯವಹಾರ’ ಈ ವರ್ಷದ ಸಪ್ತಾಹದ ಥೀಮ್ ಆಗಿದೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

‘ಕಾಲೇಜು ಆವರಣದ ಎಸ್.ಎಸ್. ಮಲ್ಲಿಕಾರ್ಜುನ ಸಭಾಂಗಣದಲ್ಲಿ ಅಂದು ಬೆಳಿಗ್ಗೆ 9.15ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಯು.ಆರ್.ರಾವ್ ಉಪಗ್ರಹ ಕೇಂದ್ರದ ನಿರ್ದೇಶಕ ರಾಮನಗೌಡ ವೆಂಕನಗೌಡ ನಾಡಗೌಡ ಮುಖ್ಯಅತಿಥಿಗಳಾಗಿ ಭಾಗವಹಿಸಲಿದ್ದಾರೆ. ರಾಘವೇಂದ್ರ ಬಿ. ಕುಲಕರ್ಣಿ, ಡಿಡಿಪಿಐ ಜಿ.ಕೊಟ್ರೇಶ್, ಬಿಐಇಟಿ ಪ್ರಾಂಶುಪಾಲ ಎಚ್.ಬಿ. ಅರವಿಂದ್ ಉಪಸ್ಥಿತರಿರಲಿದ್ದಾರೆ ಎಂದರು.

ಕಾರ್ಯಕ್ರಮದ ಅಂಗವಾಗಿ ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಸಪ್ರಶ್ನೆ, ಆಶುಭಾಷಣ ಸ್ಪರ್ಧೆ ಹಾಗೂ ಸ್ಮರಣ ಶಕ್ತಿ ಪರೀಕ್ಷೆ ಸ್ಪರ್ಧೆಗಳನ್ನು ಆಯೋಜಿಸಿದ್ದು, ಸ್ಪರ್ಧಾ ವಿಜೇತರಿಗೆ ಯು. ಆರ್. ರಾವ್ ಉಪಗ್ರಹ ಕೇಂದ್ರದ ವಿಜ್ಞಾನಿಗಳು ಬಹುಮಾನ ವಿತರಿಸಲಿದ್ದಾರೆ ಎಂದು ಹೇಳಿದರು.

ಮಕ್ಕಳಲ್ಲಿ ಅಂತರಿಕ್ಷ ವಿಜ್ಞಾನ ಮತ್ತು ದೇಶೀ ತಂತ್ರಜ್ಞಾನಗಳ ಮೇಲಿನ ಆಸಕ್ತಿ ಹೆಚ್ಚಿಸಲು ಇಸ್ರೋದ ಕೃತಕ ಉಪಗ್ರಹಗಳು, ಉಡಾವಣೆ ಯಂತ್ರಗಳು ಹಾಗೂ ಬಾಹ್ಯಾಕಾಶ ಉಪಕರಣಗಳ ವಸ್ತು ಪ್ರದರ್ಶನವನ್ನೂ ಆಯೋಜಿಸಲಾಗಿದೆ. ಕಾರ್ಯಕ್ರಮ ವೀಕ್ಷಿಸಲು ಹಾಗೂ ಸ್ಪರ್ಧೆಗಳಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಳ್ಳಬೇಕು. ಮಾಹಿತಿಗಾಗಿ ಸಂತೋಷ್ ಕುಮಾರ್ (8073286089) ಅವರನ್ನು ಸಂಪರ್ಕಿಸಬಹುದು ಎಂದು ಕಾಲೇಜಿನ ಪ್ರಾಂಶುಪಾಲ ಎಚ್.ಬಿ. ಅರವಿಂದ್ ತಿಳಿಸಿದರು.

2023-24ನೇ ಸಾಲಿನಲ್ಲಿ ಬಿಐಇಟಿ ಕಾಲೇಜಿನಲ್ಲಿ 1005 ವಿದ್ಯಾರ್ಥಿಗಳು ದಾಖಲಾಗಿದ್ದು, ಕಾಲೇಜಿನ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು. ಪ್ರಸ್ತುತ ವರ್ಷ ನವದೆಹಲಿಯ ರಾಷ್ಟ್ರೀಯ ಮಾನ್ಯತಾ ಮಂಡಳಿ (ಎನ್‌ಬಿಎ) ನಾಲ್ಕು ವಿಭಾಗಗಳಿಗೆ ಮಾನ್ಯತೆ ನೀಡಿದ್ದು, ಇದರೊಂದಿಗೆ ಕಾಲೇಜಿನ 9 ವಿಭಾಗಗಳಿಗೂ ಮಾನ್ಯತೆ ದೊರೆತಂತಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪ್ರವೀಣ್ ಕುಮಾರ್, ಸಿಎಂ. ಕಲ್ಲೇಶಪ್ಪ, ಜಿ.ಪಿ. ದೇಸಾಯಿ, ಶ್ರೀನಿಧಿ ಕುಲಕರ್ಣಿ, ಸಂತೋಷ್ ಕುಮಾರ್ ಇದ್ದರು.

BIET LIBRARY

# ವಿಶ್ವ ಅಂತರಿಕ್ಷ ಸಪ್ತಾಹ ನಾಳೆ

Vijayavani 06-10-2023

## ಇಸ್ರೋ ಯು.ಆರ್.ರಾವ್ ಸೆಟಲೈಟ್ ಸೆಂಟರ್ ಆಯೋಜನೆ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ನಗರದ ಬಿಐಇಟಿ ಕಾಲೇಜು ಆವರಣದ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದಲ್ಲಿ ಅ.7ರಂದು ವಿಶ್ವ ಅಂತರಿಕ್ಷ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಹಾಗೂ ಇಸ್ರೋ ಅಂಗಸಂಸ್ಥೆ ಯು.ಆರ್. ರಾವ್ ಸೆಟಲೈಟ್ ಸೆಂಟರ್ ಸಹಯೋಗದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರತಿವರ್ಷ ಅ.4ರಿಂದ 10ರ ವರೆಗೆ ವಿಶ್ವ ಅಂತರಿಕ್ಷ ಸಪ್ತಾಹ ಆಚರಿಸಲಾಗುತ್ತಿದ್ದು, ಅಂತರಿಕ್ಷ ಮತ್ತು ಉದ್ಯಮಶೀಲತೆ ಎಂಬುದು ಪ್ರಸಕ್ತ ವರ್ಷದ ವಿಷಯವಾಗಿದೆ. ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಯುವಜನರಲ್ಲಿ ಬಾಹ್ಯಾಕಾಶದ ಮೇಲಿನ ಆಸಕ್ತಿ ಮತ್ತು ಅನ್ವೇಷಣೆ ಉತ್ತೇಜಿಸಲು ಸಪ್ತಾಹ ಉತ್ತಮ ವೇದಿಕೆಯಾಗಿದೆ ಎಂದು ಹೇಳಿದರು. ಶನಿವಾರ ಬೆಳಗ್ಗೆ 9.15ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಯು.ಆರ್. ರಾವ್ ಉಪಗ್ರಹ ಕೇಂದ್ರದ ಉಪಗ್ರಹ ಏಕೀಕರಣ ಹಾಗೂ ಪರೀಕ್ಷಣಾ ವಿಭಾಗದ ಉಪ ನಿರ್ದೇಶಕ ರಾಮನಗೌಡ ವಿ. ನಾಡಗೌಡ ಭಾಗವಹಿಸುವರು. ಇಸ್ರೋದ ಡಾ.ರಾಘವೇಂದ್ರ ಬಿ. ಕುಲಕರ್ಣಿ, ಡಿಡಿಪಿಐ ಬಿ. ಕೊಟ್ರೇಶ್, ಪ್ರಾಚಾರ್ಯ ಡಾ.ಎಚ್.ಬಿ. ಅರವಿಂದ್ ಉಪಸ್ಥಿತರಿರುವರು ಎಂದರು.

**ಸ್ಪರ್ಧೆಗಳು:** ಸಪ್ತಾಹ ಪ್ರಯುಕ್ತ ಶನಿವಾರ ಬೆಳಗ್ಗೆ 11.10ಕ್ಕೆ ಜಿಲ್ಲೆಯ ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ರಸಪ್ರಶ್ನೆ, ಆಶುಭಾಷಣ ಹಾಗೂ ಸ್ಮರಣ ಶಕ್ತಿ ಪರೀಕ್ಷೆ ಸ್ಪರ್ಧೆ ನಡೆಯಲಿದೆ. ವಿಜೇತರಿಗೆ ಬಹುಮಾನ ವಿತರಿಸಲಾಗುವುದು.

**ಬಾಹ್ಯಾಕಾಶ ಉಪಕರಣ ವಸ್ತು ಪ್ರದರ್ಶನ:** ಮಕ್ಕಳಲ್ಲಿ ಅಂತರಿಕ್ಷ ವಿಜ್ಞಾನ ಹಾಗೂ ದೇಶಿಯ ತಂತ್ರಜ್ಞಾನಗಳ ಮೇಲಿನ ಆಸಕ್ತಿ ಹೆಚ್ಚಿಸಲು ಇಸ್ರೋದ ಕೃತಕ ಉಪಕರಣ, ಉಡಾವಣೆ ಯಂತ್ರಗಳು ಮತ್ತು ಬಾಹ್ಯಾಕಾಶ ಉಪಕರಣಗಳ ವಸ್ತು ಪ್ರದರ್ಶನವೂ ನಡೆಯಲಿದೆ. ಕಾರ್ಯಕ್ರಮ ವೀಕ್ಷಣೆ, ಸ್ಪರ್ಧೆಗಳಲ್ಲಿ ಭಾಗವಹಿಸಲು ಶಾಲಾ ಕಾಲೇಜು ವಿದ್ಯಾರ್ಥಿಗಳು ಹೆಸರು ನೋಂದಾಯಿಸಬೇಕು ಎಂದರು. ಪ್ರಾಚಾರ್ಯ ಡಾ.ಎಚ್.ಬಿ. ಅರವಿಂದ್, ಜಿ.ಬಿ. ದೇಸಾಯಿ, ಡಿ.ಜಿ. ಪ್ರವೀಣ್‌ಕುಮಾರ್, ಸಿ.ಎಂ. ಕಲ್ಲೇಶಪ್ಪ, ಶ್ರೀನಿಧಿ ಕುಲಕರ್ಣಿ, ಎಂ.ಟಿ. ವಿನಯ್, ಸಂತೋಷ್‌ಕುಮಾರ್ ಇದ್ದರು.

### ನಾಲ್ಕು ವಿಭಾಗಗಳಿಗೆ ಎನ್‌ಬಿಎ ಮಾನ್ಯತೆ

ನವದೆಹಲಿಯ ರಾಷ್ಟ್ರೀಯ ಮಾನ್ಯತಾ ಮಂಡಳಿಯು ಪ್ರಸಕ್ತ ವರ್ಷ ಬಿಐಇಟಿ ಕಾಲೇಜಿನ ನಾಲ್ಕು ವಿಭಾಗಗಳಿಗೆ ಮಾನ್ಯತೆ ನೀಡಿದೆ ಎಂದು ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಬಿ. ಅರವಿಂದ್ ತಿಳಿಸಿದರು. ಟೆಕ್ಸ್‌ಟೈಲ್, ಕೆಮಿಕಲ್, ಬಯೋಟೆಕ್ನಾಲಜಿ ಹಾಗೂ ಇನ್ಫಾರ್ಮೇಷನ್ ಸೈನ್ಸ್ ವಿಭಾಗಗಳಿಗೆ ಮಾನ್ಯತೆ ನೀಡಲಾಗಿದ್ದು, ಕಾಲೇಜಿನ ಒಟ್ಟು 9 ವಿಭಾಗಗಳಿಗೆ ಎನ್‌ಬಿಎ ಮಾನ್ಯತೆ ದೊರೆತಂತಾಗಿದೆ ಎಂದು ಹೇಳಿದರು. ಟೆಕ್ಸ್‌ಟೈಲ್ ಹಾಗೂ ಕೆಮಿಕಲ್ ವಿಭಾಗದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಶೇ.100 ರಷ್ಟು ಉದ್ಯೋಗ ಲಭಿಸಲಿದೆ. ಪ್ರಸಕ್ತ ಸಾಲಿನಲ್ಲಿ ಕಾಲೇಜಿನಲ್ಲಿ 1005 ವಿದ್ಯಾರ್ಥಿಗಳು ಬಿ.ಇ. ಅಧ್ಯಯನಕ್ಕೆ ದಾಖಲಾಗಿದ್ದು ಕಾಲೇಜಿನ ಇತಿಹಾಸದಲ್ಲಿ ಮೈಲುಗಲ್ಲಾಗಿದೆ ಎಂದು ಹೇಳಿದರು.

■ ಸಪ್ತಾಹದ ಅಂಗವಾಗಿ ಜಿಲ್ಲೆಯ ಎಲ್ಲ ಪ್ರೌಢಶಾಲೆ-ಕಾಲೇಜು ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ

BIET LIBRARY

# ನಾಳೆ ಬಿಐಇಟಿಯಲ್ಲಿ ವಿಶ್ವ ಅಂತರಿಕ್ಷ ಸಪ್ತಾಹ: ಪ್ರೊ| ವೃಷಭೇಂದ್ರಪ್ಪ

Udayavani 06-10-2023

ದಾವಣಗೆರೆ: ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಇಸ್ರೋ ಅಂಗಸಂಸ್ಥೆ ಯು.ಆರ್. ರಾವ್ ಸೆಟಲೈಟ್ ಸೆಂಟರ್ ಸಹಭಾಗಿತ್ವದಲ್ಲಿ ಅ. 7 ರಂದು ಬಿಐಇಟಿಯಲ್ಲಿ ವಿಶ್ವ ಅಂತರಿಕ್ಷ ಸಪ್ತಾಹ ಹಮ್ಮಿಕೊಳ್ಳಲಾಗಿದೆ ಎಂದು ನಿರ್ದೇಶಕ ಪ್ರೊ| ವೈ. ವೃಷಭೇಂದ್ರಪ್ಪ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ಯುವ ಜನತೆಯಲ್ಲಿ ಬಾಹ್ಯಾಕಾಶದ ಬಗ್ಗೆ ಹೆಚ್ಚಿನ ಮಾಹಿತಿ ನೀಡುವ ಉದ್ದೇಶದಿಂದ ಸಪ್ತಾಹ ನಡೆಸಲಾಗುತ್ತಿದೆ. ಇಸ್ರೋ ಸಿದ್ಧಪಡಿಸಿರುವ ರಾಕೆಟ್, ಉಪಗ್ರಹ ಇತರೆ ಮಾದರಿಗಳ ಪ್ರದರ್ಶನ ನಡೆಯಲಿದೆ ಎಂದು ತಿಳಿಸಿದರು.

ಶನಿವಾರ ಬೆಳಗ್ಗೆ 9.30ಕ್ಕೆ ನಡೆಯುವ ಸಪ್ತಾಹ ಉದ್ಘಾಟನೆಯಲ್ಲಿ ಇಸ್ರೋ ಅಂಗಸಂಸ್ಥೆ ಯು.ಆರ್. ರಾವ್ ಸೈಟಲೈಟ್ ಸೆಂಟರ್‌ನ ಉಪ ನಿರ್ದೇಶಕ ರಾಮನಗೌಡ ವೆಂಕನಗೌಡ ನಾಡಗೌಡ ಉಪಗ್ರಹ, ರಾಕೆಟ್, ಅಂತರಿಕ್ಷ ಇತರೆ ವಿಷಯಗಳ ಬಗ್ಗೆ ಮಾಹಿತಿ ನೀಡುವರು. ಇಸ್ರೋದ ಡಾ| ರಾಘವೇಂದ್ರ ಬಿ. ಕುಲಕರ್ಣಿ ಇತರರು ಭಾಗವಹಿಸುವರು ಎಂದು ತಿಳಿಸಿದರು.



ದಾವಣಗೆರೆ: ಬಿಐಇಟಿ ನಿರ್ದೇಶಕ ಪ್ರೊ| ವೈ. ವೃಷಭೇಂದ್ರಪ್ಪ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ವಿಶ್ವ ಅಂತರಿಕ್ಷ ಸಪ್ತಾಹದ ಅಂಗವಾಗಿ ದಾವಣಗೆರೆ ಜಿಲ್ಲೆಯ ಎಲ್ಲ ಸರ್ಕಾರಿ, ಅನುದಾನಿತ, ಖಾಸಗಿ ಪ್ರೌಢಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ, ಆಶುಭಾಷಣ, ಸ್ಮರಣಶಕ್ತಿ ಪರೀಕ್ಷೆ ನಡೆಸಲಾಗುವುದು. ಸಂಜೆ 5.30ಕ್ಕೆ ನಡೆಯುವ ಸಮಾರೋಪದಲ್ಲಿ ವಿಜೇತರಿಗೆ ಇಸ್ರೋ ಅಂಗಸಂಸ್ಥೆ ಯು.ಆ ರ್. ರಾವ್ ಸೆಟಲೈಟ್ ಸೆಂಟರ್‌ನಿಂದ ಬಹುಮಾನ ವಿತರಿಸಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಚಿಸುವವರು ಹೆಚ್ಚಿನ ಮಾಹಿತಿಗೆ 80732-86089ಗೆ ಸಂಪರ್ಕಿಸುವಂತೆ ಕೋರಿದರು.

ಕಾಲೇಜು ಪ್ರಾಚಾರ್ಯ ಡಾ| ಎಚ್.ಬಿ. ಅರವಿಂದ್ ಮಾತನಾಡಿ, ನವದೆಹಲಿಯ ರಾಷ್ಟ್ರೀಯ ಮಾನ್ಯತಾ ಮಂಡಳಿ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿನ ಜವಳಿ, ಕೆಮಿಕಲ್ಸ್, ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ಕೋರ್ಸ್‌ಗಳಿಗೆ ಮಾನ್ಯತೆ ನೀಡಿದೆ. ಈ ಮೊದಲು ಐದು ಕೋರ್ಸ್‌ಗಳಿಗೆ ಮಾನ್ಯತೆ ದೊರೆತಿದ್ದು ಒಟ್ಟು 9 ಕೋರ್ಸ್‌ಗಳಿಗೆ ಮಾನ್ಯತೆ ದೊರೆತಂತಾಗಿದೆ. ನ್ಯಾಕ್ ಸಂಸ್ಥೆಯಿಂದ ಎ ಗ್ರೇಡ್ ದೊರೆತಿದೆ ಎಂದು ತಿಳಿಸಿದರು.

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪ್ರಸಕ್ತ ಸಾಲಿನಲ್ಲಿ ಎಲ್ಲ ಕೋರ್ಸ್‌ಗಳಿಗೆ ಸೇರಿ 1005 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಒಟ್ಟಾರೆ 1,200 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಇದ್ದು, 1 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳ ಸೇರ್ಪಡೆ ಮಧ್ಯ ಕರ್ನಾಟಕದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಒಂದು ದಾಖಲೆ ಎಂದು ತಿಳಿಸಿದರು.

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಡಾ| ಜಿ.ಪಿ. ದೇಸಾಯಿ, ಡಿ.ಜಿ. ಪ್ರವೀಣ್, ಶ್ರೀನಿಧಿ ಕುಲಕರ್ಣಿ, ಸಿ.ಎಂ. ಕಲ್ಲೇಶಪ್ಪ, ಎಂ.ಡಿ. ವಿನಯ್, ಸಂತೋಷ್ ಕುಮಾರ್ ಸುದ್ದಿಗೋಷ್ಠಿಯಲ್ಲಿದ್ದರು.

BIET LIBRARY

# ನಾಳೆ ಬಿಐಇಟಿ ಕಾಲೇಜಿನಲ್ಲಿ ವಿಶ್ವ ಅಂತರಿಕ್ಷ ಸಪ್ತಾಹ

## ಮಕ್ಕಳಿಗೆ ರಸಪ್ರಶ್ನೆ, ಆಶುಭಾಷಣ, ಸ್ಮರಣ ಶಕ್ತಿ ಪರೀಕ್ಷೆ: ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ್

• **ಕನ್ನಡಪ್ರಭ ವಾರ್ತೆ** ದಾವಣಗೆರೆ 06-10-2023

ನಗರದ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ ಹಾಗೂ ಇಸ್ರೋದ ಅಂಗಸಂಸ್ಥೆಯಾದ ಯು.ಆರ್.ರಾವ್ ಸೆಟಲೈಟ್ ಸೆಂಟರ್ ಸಹಭಾಗಿತ್ವದಲ್ಲಿ ಅ.7 ರಂದು ಬೆಳಗ್ಗೆ 9.15 ಕ್ಕೆ ನಗರದ ಬಿಐಇಟಿ ಕಾಲೇಜಿನ ಎಸ್.ಎಸ್.ಮಲ್ಲಿಕಾರ್ಜುನ ಕಲ್ಚರಲ್ ಸೆಂಟರ್‌ನಲ್ಲಿ ವಿಶ್ವ ಅಂತರಿಕ್ಷ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಚಾರ್ಯ ಡಾ.ಎಚ್.ಬಿ. ಅರವಿಂದ್ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾತನಾಡಿ ಬೆಳಗ್ಗೆ 9.15ಕ್ಕೆ ಮುಖ್ಯ ಅತಿಥಿಗಳಾಗಿ ಯು.ಆರ್.ರಾವ್ ಉಪಗ್ರಹ ಕೇಂದ್ರದ ಉಪ ನಿರ್ದೇಶಕ ಉಪಗ್ರಹ ಏಕೀಕರಣ ಹಾಗೂ ಪರೀಕ್ಷಣಾ ವಿಭಾಗದ ರಾಮನಗೌಡ ವಿ ನಾಡಗೌಡ, ಬಿಐಇಟಿ ನಿರ್ದೇಶಕ ಪ್ರೊ.ವೈ ವೃಷಬೇಂದ್ರಪ್ಪ ಹಾಗೂ ಇಸ್ರೊ ಛೇರ್‌ಪರ್ಸನ್ ಡಾ.ರಾಘವೇಂದ್ರ ಬಿ.ಕುಲಕರ್ಣಿ, ಡಿಡಿಪಿಐ ಬಿ. ಕೊಟ್ರೇಶ್ ಭಾಗವಹಿಸುವರು ಎಂದರು.

ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಉದ್ದೇಶದಿಂದ ಜಿಲ್ಲೆಯ ಎಲ್ಲಾ ಪ್ರೌಢಶಾಲಾ ಮತ್ತು ಕಾಲೇಜು ಮಕ್ಕಳಿಗೆ ರಸಪ್ರಶ್ನೆ ಕಾರ್ಯಕ್ರಮ , ಆಶುಭಾಷಣ ಸ್ಪರ್ಧೆ ಹಾಗೂ ಸ್ಮರಣ ಶಕ್ತಿ ಪರೀಕ್ಷೆ ಸ್ಪರ್ಧೆಗಳ ಇಸ್ರೋದ ಯು. ಆರ್. ರಾವ್ ಸೆಟಲೈಟ್ ಸೆಂಟರ್‌ವಿಜ್ಞಾನಿಗಳು ಆಯೋಜಿಸಿದ್ದಾರೆ. ಈ ಎಲ್ಲಾ ಸ್ಪರ್ಧೆಗಳ ವಿಜೇತರಿಗೆ ಯು.ಆರ್.ರಾವ್ ಉಪಗ್ರಹ ಕೇಂದ್ರ, ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆಯವರು ಬಹುಮಾನ ವಿತರಿಸುವರು.

ಈ ವೇಳೆ ಕಾಲೇಜಿನ ಕುರಿತು ಮಾತನಾಡಿ 2023-24ರ ಸಾಲಿನಲ್ಲಿ ಬಿ.ಐ.ಇ.ಟಿ ಕಾಲೇಜಿನಲ್ಲಿ 1005 ವಿದ್ಯಾರ್ಥಿಗಳು ಬಿ.ಇ , ಅಧ್ಯಯನಕ್ಕೆ ದಾಖಲಾಗಿದ್ದು ಕಾಲೇಜಿನ ಇತಿಹಾಸದಲ್ಲಿ ಇದೊಂದು ಮೈಲುಗಲ್ಲಾಗಿದೆ.




ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ವಿಶ್ವ ಅಂತರಿಕ್ಷ ಸಪ್ತಾಹ ಕಾರ್ಯಕ್ರಮ ಹಮ್ಮಿಕೊಂಡಿರುವ ಕುರಿತು ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

### ಬಾಹ್ಯಾಕಾಶ ಉಪಕರಣಗಳ ವಸ್ತು ಪ್ರದರ್ಶನ

ಮಕ್ಕಳಲ್ಲಿ ಅಂತರಿಕ್ಷ ವಿಜ್ಞಾನ ಮತ್ತು ದೇಶಿಯ ತಂತ್ರಜ್ಞಾನಗಳ ಮೇಲಿನ ಆಸಕ್ತಿ ಹೆಚ್ಚಿಸುವ ಸಲುವಾಗಿ ಇಸ್ರೋದ ಕೃತಕ ಉಪಗ್ರಹಗಳು, ಉಡಾವಣೆ ಯಂತ್ರಗಳು ಮತ್ತು ಬಾಹ್ಯಾಕಾಶ ಉಪಕರಣಗಳ ವಸ್ತು ಪ್ರದರ್ಶನ ಆಯೋಜಿಸಲಾಗಿದೆ. ಆದ್ದರಿಂದ ಎಲ್ಲಾ ಶಾಲೆಗಳ ಶಿಕ್ಷಕರು ತಮ್ಮ ವಿದ್ಯಾರ್ಥಿಗಳೊಂದಿಗೆ ಈ ಕಾರ್ಯಕ್ರಮ ವೀಕ್ಷಿಸಲು ಮತ್ತು ಸ್ಪರ್ಧೆಗಳಲ್ಲಿ ತಮ್ಮ ಶಾಲೆಯ ವಿದ್ಯಾರ್ಥಿಗಳು ಹೆಸರುಗಳ ನೋಂದಾಯಿಸಬೇಕು ಎಂದು ಡಾ.ಎಚ್.ಬಿ. ಅರವಿಂದ್ ತಿಳಿಸಿದರು.

ಪ್ರಸ್ತುತ ವರ್ಷ ನವದೆಹಲಿಯ ರಾಷ್ಟ್ರೀಯ ಮಾನ್ಯತಾ ಮಂಡಳಿ ನಾಲ್ಕು ವಿಭಾಗಗಳನ್ನು ಮಾನ್ಯತೆ ಮಾಡಿದ್ದು ಇದರೊಂದಿಗೆ ಕಾಲೇಜಿನ ಒಟ್ಟು 9 ವಿಭಾಗಗಳಿಗೆ ಎನ್‌ಬಿಎ ಮಾನ್ಯತೆ ದೊರೆತಂತಾಗಿದೆ.

ಹೆಚ್ಚಿನ ಮಾಹಿತಿಗಾಗಿ ಡಾ.ಸಂತೋಷ್ ಕುಮಾರ್ (ಮೊ: 8073286089)ರನ್ನು ಸಂಪರ್ಕಿಸಿ. ಸುದ್ದಿಗೋಷ್ಠಿಯಲ್ಲಿ, ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಡಿ.ಜಿ.ಪ್ರವೀಣ್ ಕುಮಾರ್, ಸಿ.ಎಂ. ಕಲ್ಲೇಶಪ್ಪ, ಕುಲಕರ್ಣಿ, ಜಿ.ಬಿ.ದೇಸಾಯಿ ಇತರರಿದ್ದರು.

BIET LIBRARY

# BIET to organise World Space Week prog from tomorrow

DECCAN HERALD
06-10-2023

DAVANGERE, DHNS: The Bapuji Institute of Engineering & Technology (BIET) is organising World Space Week at its campus in the City from October 7, in association with U R Rao Satellite Centre, a unit of ISRO.

Speaking to media persons here on Thursday, BIET Director Y Vrishabhendrappa said, U R Rao Satellite Centre Director Ramanagowda Venkanagowda Nadagowda will be the chief guest of the event to be held at 9:15 am at S S Mallikarjun Auditorium in the college campus. Deputy Director of Pre-University Education B Kotresh, and BIET Principal H B Aravind will be present.

Deccanherald 06-10-2023

In order to educate students and public about space, the Space Week programme is being organised. The World Space Week 2023 theme is 'Space & Entrepreneurship'.

BIET Principal Aravind said, the winners in pick & speak, and memory power competitions will be given prizes. There would be an exhibition of satellites developed by ISRO, space-related devices and machines, so that students and general public can have basic knowledge of it. For registration, students can call on 80732 86089, he said.

Regarding BAIT, he said, 1,005 students have enrolled for various courses in the college for the academic year 2023-24. Four departments of the college have obtained NAAC accreditation this year, and with this, nine departments of the college have been accredited by NAAC, he added.

Janatha Vani08-10-2023 BIET LIBRARY
LIBRARY

# ಸಾಮಾನ್ಯರಿಂದ ಅಸಾಮಾನ್ಯ ಕೆಲಸವೇ ಇಸ್ರೋ ಹೆಮ್ಮೆ

## ಇಸ್ರೋದಲ್ಲಿನ ಶೇ.70ರಷ್ಟು ಜನರು ಗ್ರಾಮೀಣರು, ಸಾಮಾನ್ಯ ಹಿನ್ನೆಲೆಯವರು : ರಾಮನಗೌಡ ನಾಡಗೌಡ

ದಾವಣಗೆರೆ, ಅ. 7 - ಕಠಿಣ ಪರಿಶ್ರಮ, ಗ್ರಾಮೀಣ ಪ್ರತಿಭೆಗಳಿಗೆ ಪ್ರೋತ್ಸಾಹ, ತಂಡವಾಗಿ ಕಾರ್ಯನಿರ್ವಹಣೆ ಹಾಗೂ ಸ್ವಂತ ಶಕ್ತಿಯ ಮೇಲೆ ನಂಬಿಕೆ ಇರಿಸಿರುವುದು ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ಯಶಸ್ಸಿಗೆ ನೆರವಾಗಿವೆ ಎಂದು ಇಸ್ರೋದ ಯು.ಆರ್. ರಾವ್ ಉಪಗ್ರಹ ಕೇಂದ್ರದ ಇಂಟಿಗ್ರೇಷನ್ ಅಂಡ್ ಚೆಕೌಟ್ ಏರಿಯಾ ಉಪ ನಿರ್ದೇಶಕ ರಾಮನಗೌಡ ವಿ. ನಾಡಗೌಡ ಅಭಿಪ್ರಾಯ ಪಟ್ಟಿದ್ದಾರೆ.

ನಗರದ ಬಿ.ಐ.ಇ.ಟಿ. ಕಾಲೇಜಿನಲ್ಲಿ ಬೆಂಗಳೂರಿನ ಇಸ್ರೋ ಯು.ಆರ್. ಉಪಗ್ರಹ ಕೇಂದ್ರದ ಸಹಭಾಗಿತ್ವದಲ್ಲಿ ಆಯೋಜಿಸಲಾಗಿದ್ದ ವಿಶ್ವ ಬಾಹ್ಯಾಕಾಶ ಸಪ್ತಾಹ ಉದ್ಘಾಟಿಸಿ ಅವರು ಮಾತನಾಡಿದರು.

ಬಾಹ್ಯಾಕಾಶ ನೌಕೆಯ ಪಿತಾಮಹ ಎಂದೇ ಹೆಸರಾಗಿರುವ ಪ್ರೊ. ಯು.ಆರ್. ರಾವ್ ಅವರ ನೇತೃತ್ವದಲ್ಲಿ 1972ರಲ್ಲಿ ಕೇವಲ ಮೂರು ವರ್ಷಗಳಲ್ಲಿ ದೇಶದ ಮೊದಲ ಉಪಗ್ರಹವಾದ ಆರ್ಯಭಟ ರೂಪಿಸಲಾಗಿತ್ತು. ಅವರ ತಂಡದಲ್ಲಿದ್ದ ಎಲ್ಲರೂ ಸಾಮಾನ್ಯ ಹಿನ್ನೆಲೆಯವರೇ ಆಗಿದ್ದರು ಎಂದರು.

ಈಗಲೂ ಇಸ್ರೋದಲ್ಲಿನ ಶೇ.70ರಷ್ಟು ಜನರು ಹಳ್ಳಿಗಾಡು ಹಾಗೂ ಸಾಧಾರಣ ಕುಟುಂಬಗಳ ಹಿನ್ನೆಲೆಯಿಂದ ಬಂದವರು. ಸಾಮಾನ್ಯರಿಂದ ಅಸಾಮಾನ್ಯ ಕಾರ್ಯಗಳನ್ನು ಮಾಡಿಸುವುದೇ ಇಸ್ರೋ ಹೆಮ್ಮೆ ಎಂದವರು ಹೇಳಿದರು.

ಇಸ್ರೋದ ಅಧ್ಯಕ್ಷರೂ ಸೇರಿದಂತೆ ಉನ್ನತ ಸ್ಥಾನದಲ್ಲಿರುವವರು ಸರಳವಾಗಿ ಎಲ್ಲರ ಜೊತೆ ಬೆರೆಯುತ್ತಾರೆ. ಹೀಗಾಗಿಯೇ ಇಸ್ರೋದಲ್ಲಿ ನಾಯಕತ್ವ ಇದೆಯೇ ಹೊರತು, ಪಾಳೆಗಾರಿಕೆ ಇಲ್ಲ ಎಂದು ನಾಡಗೌಡ ತಿಳಿಸಿದರು.

ಬೆಂಗಳೂರಿನ ಎನ್.ಐ.ಎಸ್.ಎ.ಆರ್. ಯೋಜನಾ ನಿರ್ದೇಶಕ ಸಿ.ವಿ. ಶ್ರೀಕಾಂತ್ (2ನೇ ಪುಟಕ್ಕೆ)



## ಬಾಹ್ಯಾಕಾಶ ವಲಯದಲ್ಲಿ ಆತ್ಮನಿರ್ಭರ ಅನಿವಾರ್ಯ

ಬಾಹ್ಯಾಕಾಶ ವಲಯಕ್ಕೆ ಸಂಬಂಧಿಸಿದ ತಂತ್ರಜ್ಞಾನಗಳು ಹಣ ಕೊಟ್ಟರೂ ಸಮರ್ಪಕವಾಗಿ ಸಿಗುವುದಿಲ್ಲ. ಹೀಗಾಗಿ ದೇಶೀಯ ತಂತ್ರಜ್ಞಾನದ ಅಭಿವೃದ್ಧಿ ಅನಿವಾರ್ಯ ಎಂದು ವಿಜ್ಞಾನಿ ರಾಮನಗೌಡ ವಿ. ನಾಡಗೌಡ ಹೇಳಿದರು.

ರಿಮೋಟ್ ಸೆನ್ಸಿಂಗ್ ಉಪಗ್ರಹವಾದ ಐ.ಆರ್.ಎಸ್. ಅಭಿವೃದ್ಧಿ ಪಡಿಸಲು ನಾಲ್ಕು ವರ್ಷ ಹಾಗೂ 12 ಸಾವಿರ ಕೋಟಿ ರೂ. ಬೇಕಾಗಬಹುದು ಎಂದು ಇಸ್ರೇಲ್ ಬಾಹ್ಯಾಕಾಶ ಸಂಸ್ಥೆ ತಿಳಿಸಿತ್ತು. ಆದರೆ, ನಾವು ಹಣ ಕೊಡಲು ಸಿದ್ಧವಿದ್ದರೂ ಅಷ್ಟೊಂದು ಸಮಯಾವಕಾಶ ಇರಲಿಲ್ಲ. ಇದನ್ನು ಸವಾಲಾಗಿ ಸ್ವೀಕರಿಸಿ ಎರಡೇ ವರ್ಷಗಳಲ್ಲಿ ಕೇವಲ 1 ಸಾವಿರ ಕೋಟಿ ರೂ.ಗಳ ವೆಚ್ಚದಲ್ಲಿ ತಂತ್ರಜ್ಞಾನವನ್ನು ದೇಶೀಯವಾಗಿ ರೂಪಿಸಿದ್ದೆವು. ಈ ಯೋಜನೆಯನ್ನು ನನ್ನ ನೇತೃತ್ವದ ತಂಡ ಕೈಗೊಂಡಿದ್ದು ಮತ್ತಷ್ಟು ಸಂತೋಷ ತಂದಿತ್ತು ಎಂದು ನಾಡಗೌಡ ಹೇಳಿದರು.

## ಇಸ್ರೋದಿಂದ ಉಪಗ್ರಹ, ರಾಕೆಟ್ ಮಾದರಿ ಪ್ರದರ್ಶನ

ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋದಿಂದ ಉಪಗ್ರಹ ಹಾಗೂ ರಾಕೆಟ್ ಮಾದರಿಗಳನ್ನು ಪ್ರದರ್ಶಿಸಲಾಯಿತು. ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ, ಆಶುಭಾಷಣ ಹಾಗೂ ಸ್ಮರಣ ಶಕ್ತಿ ಪರೀಕ್ಷಾ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

# ಕೆಲಸವೇ ಇಸ್ರೋ ಹೆಮ್ಮೆ

**(1ನೇ ಪುಟದಿಂದ)** ಮಾತನಾಡಿ, ಇಸ್ರೋ ಹಾಗೂ ಅಮೆರಿಕದ ಬಾಹ್ಯಾ ಕಾಶ ಸಂಸ್ಥೆಯಾದ ನಾಸಾ ಜೊತೆ ಗೂಡಿ ವಿಶ್ವದ ಅತಿ ದೊಡ್ಡ ಭೂ ಘರಿ ವೀಕ್ಷಣಾ ಉಪಗ್ರಹ ರೂಪಿಸುತ್ತಿವೆ. ಇದರ ಒಟ್ಟು ವೆಚ್ಚ 11 ಸಾವಿರ ಕೋಟಿ ರೂ. ಎಂದು ಹೇಳಿದರು. ಈ ಯೋಜನೆಯ ಶೇ.65ರಷ್ಟು ಕೆಲಸಕ್ಕೆ ಇಸ್ರೋ ಸಾವಿರ ಕೋಟಿ ರೂ. ಮಾತ್ರ ಖರ್ಚು ಮಾಡುತ್ತಿದೆ. ನಾಸಾ ಕೇವಲ ಶೇ.35ರಷ್ಟು ಕೆಲಸಕ್ಕೆ 10 ಸಾವಿರ ಕೋಟಿ ರೂ. ಖರ್ಚು ಮಾಡುತ್ತಿದೆ. ಇಸ್ರೋ ಕಡಿಮೆ ವೆಚ್ಚದ ಪರಿಹಾರ ಹುಡುಕುವುದಕ್ಕೆ ಇದು ಉದಾಹರಣೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಇಸ್ರೋದ ವಿಶ್ವ ಬಾಹ್ಯಾಕಾಶ ಸಪ್ತಾಹ ಯೋಜನೆ ಅಧ್ಯಕ್ಷ ಡಾ. ರಾಘವೇಂದ್ರ ಬಿ. ಕುಲಕರ್ಣಿ, ಬಾಹ್ಯಾಕಾಶ ತಂತ್ರಜ್ಞಾನದ ಲಾಭಗಳ ಬಗ್ಗೆ ಜನಸಾಮಾನ್ಯರಿಗೆ ತಿಳಿಸಲು ವಿಶ್ವದಾದ್ಯಂತ ಸಪ್ತಾಹ ಆಚರಿಸಲಾಗುತ್ತಿದೆ ಎಂದರು.

ವೇದಿಕೆಯ ಮೇಲೆ ಡಿ.ಡಿ.ಪಿ.ಐ. ಜಿ. ಕೊಟ್ರೇಶ್, ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಬಿಐಇಟಿ ಪ್ರಾಂಶುಪಾಲ ಹೆಚ್.ಬಿ. ಅರವಿಂದ್ ಉಪಸ್ಥಿತರಿದ್ದರು. ದಿವ್ಯ ಹಿರೇಮಠ್ ಪ್ರಾರ್ಥಿಸಿದರು. ಸಿ.ಆರ್. ನಿರ್ಮಲ ಸ್ವಾಗತಿಸಿದರು. ಐಶ್ವರ್ಯ ಹಾಗೂ ಸೃಜನ್ ನಿರೂಪಿಸಿದರೆ, ಕೆ.ಎಂ. ನರೇಶ್ ಪಟೇಲ್ ವಂದನಾರ್ಪಣೆ ನೆರವೇರಿಸಿದರು.

VIJAYVANI 08-10-2023 BIET LIBRARY

### ಇಸ್ರೋ ಸಂಸ್ಥೆಯ ರಾಮನಗೌಡ ವಿ. ನಾಡಗೌಡ ಹೇಳಿಕೆ | ಬಿಐಇಟಿಯಲ್ಲಿ ವಿಶ್ವ ಬಾಹ್ಯಾಕಾಶ ಸಪ್ತಾಹ

# ಸಾಮಾನ್ಯರಿಂದ ಅಸಾಮಾನ್ಯ ಕಾರ್ಯ

■ ವಿಜಯವಾಣಿ ಸುದ್ದಿಜಾಲ ದಾವಣಗೆರೆ

ಸಾಮಾನ್ಯರಿಂದ ಅಸಾಮಾನ್ಯ ಕಾರ್ಯ ಮಾಡಿಸುವುದು ಇಸ್ರೋ ಸಂಸ್ಥೆಯ ಹೆಮ್ಮೆ ಎಂದು ಇಸ್ರೋದ ಯು.ಆರ್. ರಾವ್ ಉಪಗ್ರಹ ಕೇಂದ್ರದ ಇಂಟಿಗ್ರೇಷನ್ ಆ್ಯಂಡ್ ಚೆಕೌಟ್ ಏರಿಯಾ ಉಪ ನಿರ್ದೇಶಕ ರಾಮನಗೌಡ ವಿ. ನಾಡಗೌಡ ಹೇಳಿದರು.

ನಗರದ ಬಿ.ಐ.ಇ.ಟಿ. ಕಾಲೇಜಿನಲ್ಲಿ ಶನಿವಾರ ಇಸ್ರೋ ಅಂಗಸಂಸ್ಥೆ ಯು.ಆರ್. ರಾವ್ ಸೆಟಲೈಟ್ ಸೆಂಟರ್ ಸಹಯೋಗದಲ್ಲಿ ಆಯೋಜಿಸಲಾಗಿದ್ದ ವಿಶ್ವ ಬಾಹ್ಯಾಕಾಶ ಸಪ್ತಾಹ ಉದ್ಘಾಟಿಸಿ ಮಾತನಾಡಿದರು.

ಬಾಹ್ಯಾಕಾಶ ನೌಕೆಯ ಪಿತಾಮಹ ಎಂದೇ ಹೆಸರಾಗಿರುವ ಪ್ರೊ. ಯು.ಆರ್. ರಾವ್ ನೇತೃತ್ವದಲ್ಲಿ ಕೇವಲ ಮೂರು ವರ್ಷಗಳಲ್ಲಿ ದೇಶದ ಮೊದಲ ಉಪಗ್ರಹವಾದ ಆರ್ಯಭಟ ರೂಪಿಸಲಾಗಿತ್ತು. ಅವರ ತಂಡದಲ್ಲಿದ್ದ ಎಲ್ಲರೂ ಸಾಮಾನ್ಯ ಹಿನ್ನೆಲೆಯವರೇ ಆಗಿದ್ದರು ಎಂದರು.

ಈಗಲೂ ಇಸ್ರೋದಲ್ಲಿನ ಶೇ. 70ರಷ್ಟು ಜನರು ಹಳ್ಳಿಗಾಡು ಹಾಗೂ ಸಾಧಾರಣ ಕುಟುಂಬಗಳ ಹಿನ್ನೆಲೆಯಿಂದ ಬಂದವರು. ಇಸ್ರೋದ ಅಧ್ಯಕ್ಷರೂ ಸೇರಿ ಉನ್ನತ ಸ್ಥಾನದಲ್ಲಿರುವವರು ಸರಳವಾಗಿ ಎಲ್ಲರ ಜತೆ ಬೆರೆಯುತ್ತಾರೆ. ಹೀಗಾಗಿಯೇ ಇಸ್ರೋದಲ್ಲಿ ನಾಯಕತ್ವ ಇದೆಯೇ ಹೊರತು ಪಾಳೇಗಾರಿಕೆ ಇಲ್ಲ ಎಂದು ತಿಳಿಸಿದರು. ಕಠಿಣ ಪರಿಶ್ರಮ, ಗ್ರಾಮೀಣ ಪ್ರತಿಭೆಗಳಿಗೆ ಪ್ರೋತ್ಸಾಹ, ತಂಡವಾಗಿ ಕಾರ್ಯ ನಿರ್ವಹಣೆ ಹಾಗೂ ಸ್ವಂತ ಶಕ್ತಿಯ ಮೇಲೆ ನಂಬಿಕೆ ಇರಿಸಿರುವುದು ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ಯಶಸ್ಸಿಗೆ ನೆರವಾಗಿದೆ ಎಂದು ಅಭಿಪ್ರಾಯಪಟ್ಟರು.

ವಿಜಯವಾಣಿ ಚಿತ್ರ



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ಶನಿವಾರ ವಿಶ್ವ ಬಾಹ್ಯಾಕಾಶ ಸಪ್ತಾಹ ಕಾರ್ಯಕ್ರಮವನ್ನು ಇಸ್ರೋದ ಯು.ಆರ್. ರಾವ್ ಉಪಗ್ರಹ ಕೇಂದ್ರದ ಇಂಟಿಗ್ರೇಷನ್ ಆ್ಯಂಡ್ ಚೆಕೌಟ್ ಏರಿಯಾ ಉಪ ನಿರ್ದೇಶಕ ರಾಮನಗೌಡ ವಿ. ನಾಡಗೌಡ ಉದ್ಘಾಟಿಸಿದರು. ಸಿ.ವಿ. ಶ್ರೀಕಾಂತ್, ಡಾ. ರಾಘವೇಂದ್ರ ಬಿ. ಕುಲಕರ್ಣಿ, ಬಿ. ಕೊಟ್ರೇಶ್, ಪ್ರೊ.ವೈ. ವೃಷಭೇಂದ್ರಪ್ಪ, ಎಚ್.ಬಿ. ಅರವಿಂದ್ ಮತ್ತು ವಿದ್ಯಾರ್ಥಿಗಳು ಇದ್ದರು.

> ಬಾಹ್ಯಾಕಾಶ ತಂತ್ರಜ್ಞಾನದ ಲಾಭಗಳ ಬಗ್ಗೆ ಜನಸಾಮಾನ್ಯರಿಗೆ ತಿಳಿಸಲು ವಿಶ್ವದಾದ್ಯಂತ ಸಪ್ತಾಹ ಆಚರಿಸಲಾಗುತ್ತಿದೆ.
>
> | **ಡಾ. ರಾಘವೇಂದ್ರ ಕುಲಕರ್ಣಿ**
> ಇಸ್ರೋದ ವಿಶ್ವ ಬಾಹ್ಯಾಕಾಶ ಸಪ್ತಾಹ ಯೋಜನೆ ಅಧ್ಯಕ್ಷ

ಬೆಂಗಳೂರಿನ ಎನ್.ಐ.ಎಸ್.ಎ.ಆರ್. ಯೋಜನಾ ನಿರ್ದೇಶಕ ಸಿ.ವಿ. ಶ್ರೀಕಾಂತ್ ಮಾತನಾಡಿ, ಇಸ್ರೋ ಹಾಗೂ ಅಮೆರಿಕದ ಬಾಹ್ಯಾಕಾಶ ಸಂಸ್ಥೆಯಾದ ನಾಸಾ ಜತೆಗೂಡಿ ವಿಶ್ವದ ಅತಿ ದೊಡ್ಡ ಭೂ ಪರಿವೀಕ್ಷಣಾ ಉಪಗ್ರಹ ರೂಪಿಸುತ್ತಿವೆ. ಇದರ ಒಟ್ಟು ವೆಚ್ಚ 11 ಸಾವಿರ ಕೋಟಿ ರೂ. ಎಂದು ಹೇಳಿದರು.

ಈ ಯೋಜನೆಯ ಶೇ. 65ರಷ್ಟು ಕೆಲಸಕ್ಕೆ ಇಸ್ರೋ ಸಾವಿರ ಕೋಟಿ ರೂ. ಮಾತ್ರ ಖರ್ಚು ಮಾಡುತ್ತಿದೆ. ನಾಸಾ ಕೇವಲ ಶೇ. 35ರಷ್ಟು ಕೆಲಸಕ್ಕೆ 10 ಸಾವಿರ ಕೋಟಿ ರೂ. ವೆಚ್ಚ ಮಾಡುತ್ತಿದೆ. ಇಸ್ರೋ ಕಡಿಮೆ ವೆಚ್ಚದ ಪರಿಹಾರ ಹುಡುಕುವುದಕ್ಕೆ ಇದು ಉದಾಹರಣೆ ಎಂದರು.

ಡಿಡಿಪಿಐ ಬಿ. ಕೊಟ್ರೇಶ್, ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಬಿಐಇಟಿ ಪ್ರಾಚಾರ್ಯ ಎಚ್.ಬಿ. ಅರವಿಂದ್ ಇದ್ದರು. ದಿವ್ಯಾ ಹಿರೇಮಠ್ ಪ್ರಾರ್ಥಿಸಿದರು. ಸಿ.ಆರ್. ನಿರ್ಮಲಾ ಸ್ವಾಗತಿಸಿದರು. ಐಶ್ವರ್ಯ ಹಾಗೂ ಸೃಜನ್ ನಿರೂಪಿಸಿದರು. ಕೆ.ಎಂ. ನರೇಶ್ ಪಟೇಲ್ ವಂದಿಸಿದರು.

ಕಾರ್ಯಕ್ರಮದ ಅಂಗವಾಗಿ ಇಸ್ರೋದಿಂದ ಉಪಗ್ರಹ ಹಾಗೂ ರಾಕೆಟ್ ಮಾದರಿ ಪ್ರದರ್ಶಿಸಲಾಯಿತು. ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ, ಆಶುಭಾಷಣ ಹಾಗೂ ಸ್ಮರಣ ಶಕ್ತಿ ಪರೀಕ್ಷಾ ಸ್ಪರ್ಧೆ ಆಯೋಜಿಸಲಾಗಿತ್ತು.

NAGARAVANI BIET LIBRARY



# ವಿಜ್ಞಾನ-ತಂತ್ರಜ್ಞಾನದ ಮೂಲ ಆಶಯ ಮನುಷ್ಯನ ನೆಮ್ಮದಿ: ವಿಜ್ಞಾನಿ ರಮಣಗೌಡ

ದಾ.ನಗರವಾಣಿ ಸುದ್ದಿ

ದಾವಣಗೆರೆ.ಅ.7: ಮನುಷ್ಯನ ಸಂತೋಷ ಮತ್ತು ನೆಮ್ಮದಿ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲ ಆಶಯವಾಗಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋದ ಅಂಗ ಸಂಸ್ಥೆಯಾದ ಯು.ಆರ್ ರಾವ್ ಉಪಗ್ರಹ ಕೇಂದ್ರದ ಉಪ ನಿರ್ದೇಶಕ ರಮಣಗೌಡ ವಿ. ನಾಡಗೌಡ ಹೇಳಿದರು.

ಶನಿವಾರ ನಗರದ ಬಿಐಇಟಿ ಕಾಲೇಜಿನ ಎಸ್‌ಎಸ್ ಸಾಂಸ್ಕೃತಿಕ ಭವನದಲ್ಲಿ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಇಸ್ರೋದ ಯು.ಆರ್ ರಾವ್ ಉಪಗ್ರಹ ಕೇಂದ್ರದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಅಂತರಿಕ್ಷ ಸಪ್ತಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು

ಸೋಲಿನಿಂದ ಅಳುಕದೆ ಸತತ ಪ್ರಯತ್ನ ಮಾಡಿದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಕೈಗೊಂಡ 'ಚಂದ್ರಯಾನ-3' ಯಶಸ್ಸು ಒಂದು ಸ್ಪಷ್ಟ ನಿದರ್ಶನವಾಗಿದೆ. ಈ ಯಶಸ್ಸು ನಮ್ಮ ವಿಜ್ಞಾನಿಗಳಲ್ಲಿ ಹೊಸ ಹುಮ್ಮಸ್ಸು ತುಂಬಿದೆ ಎಂದು ಹೇಳಿದರು.

ಜನರಿಗೆ ನೇರವಾಗಿ ಉಪಯೋಗವಾಗುವ ಕಾರ್ಯಗಳನ್ನು ಇಸ್ರೋ ಮಾಡುತ್ತಿದೆ. ಹೀಗಾಗಿ ಇಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರೂ ಸಂತೋಷ ಮತ್ತು ಆತ್ಮತೃಪ್ತಿಯಿಂದ ಕೆಲಸ ಮಾಡುತ್ತಾರೆ. ಅದೇ ರೀತಿ ವಿಜ್ಞಾನ ಮತ್ತು ತಂತ್ರಜ್ಞಾನ, ಆವಿಷ್ಕಾರಗಳ ಮೂಲ ಉದ್ದೇಶ ನಾವೆಲ್ಲರೂ ನೆಮ್ಮದಿ, ಸಂತೋಷದಿಂದ ಇರಬೇಕು ಎಂಬುದೇ ಆಗಿದೆ ಎಂದರು.

ಇಸ್ರೋದಲ್ಲಿ ಕೆಲಸ ಮಾಡುವ ಕಾರು ಚಾಲಕನಿಂದ ಹಿಡಿದು ಹಿರಿಯ ವಿಜ್ಞಾನಿಗಳ ವರೆಗೂ ಯಾರಲ್ಲೂ ಮೇಲು- ಕೀಳು ಎನ್ನುವ ಭೇದಭಾವವಿಲ್ಲ. ಅಂಥಹ ವಾತಾವರಣದಿಂದಾಗಿ ಒಳ್ಳೆ ರೀತಿಯಲ್ಲಿ ಕೆಲಸ ಮಾಡಲು ಮನೋಬಲ ಸಿಗುತ್ತದೆ. ಆತ್ಮವಿಶ್ವಾಸ ಹೆಚ್ಚುತ್ತದೆ. ಎಲ್ಲರೂ ಒಂದೇ ತಂಡವಾಗಿ ಕೆಲಸ ಮಾಡುವುದರಿಂದಲೇ ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಇಷ್ಟೊಂದು ವಿಕ್ರಮಗಳನ್ನು ಸಾಧಿಸಲು ಸಾಧ್ಯವಾಗಿದೆ ಎಂದು ಹೇಳಿದರು.



ಯಾವುದೇ ಉಪಗ್ರಹ, ತಂತ್ರಜ್ಞಾನಗಳನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಪರಿಣಾಮಕಾರಿಯಾಗಿ ನಿರ್ವಹಿಸುವುದು, ನಿರ್ಮಿಸುವುದು ಇಸ್ರೋ ವೈಶಿಷ್ಟ್ಯ ಗಳಲ್ಲಿ ಒಂದು. 2018ರಲ್ಲಿ ದೇಶದ ಭದ್ರತೆ ದೃಷ್ಟಿಯಿಂದ ಗಡಿ ಗಣ್ಗಾವಲಿಗೆ ಭಾರತಕ್ಕೆ ಮೂರು ಅತ್ಯುನ್ನತ ತಂತ್ರಜ್ಞಾನದ ಉಪಗ್ರಹಗಳ ಅಗತ್ಯವಿತ್ತು. ಆದರೆ ಆಗ ಆ ತಂತ್ರಜ್ಞಾನ ಇದ್ದದ್ದು ಇಸ್ರೇಲ್ ಬಳಿ ಮಾತ್ರ, ಅಂದು ಇಸ್ರೋ ಅಧ್ಯಕ್ಷರಾಗಿದ್ದ ಶಿವನ್ ಅವರು ಇಸ್ರೇಲ್ ಬಾಹ್ಯಾಕಾಶ ಸಂಸ್ಥೆ ಮುಖ್ಯಸ್ಥರನ್ನು ಕರೆಸಿ ಉಪಗ್ರಹ ತಯಾರಿ ಕುರಿತು ಚರ್ಚಿಸಿದ್ದರು.

ಒಂದು ವರ್ಷದಲ್ಲಿ ಮೂರು ಉಪಗ್ರಹಗಳನ್ನು ಸಿದ್ಧಪಡಿಸಬೇಕು ಎಂಬುದು ನಮ್ಮ ಬೇಡಿಕೆಯಾಗಿತ್ತು. ಆದರೆ ಉಪಗ್ರಹ ತಯಾರಿಗೆ ಕನಿಷ್ಠ 4 ವರ್ಷ ಬೇಕು, ತಲಾ 4,000 ಕೋಟಿ ರೂ.ನಂತೆ ಮೂರು ಉಪಗ್ರಹಗಳಿಗೆ ಒಟ್ಟು 12,000 ವೆಚ್ಚವಾಗಲಿದೆ ಎಂದು ಇಸ್ರೇಲ್ ವಿಜ್ಞಾನಿ ತಿಳಿಸಿದರು. ಬಳಿಕ ಅದೇ ಕಾರ್ಯವನ್ನು ಭಾರತದ ವಿಜ್ಞಾನಿಗಳು ಎರಡು ವರ್ಷದಲ್ಲಿ ಕೇವಲ 1000 ಕೋಟಿ ರೂ. ವೆಚ್ಚದಲ್ಲಿ ಮಾಡಿ ಮುಗಿಸಿದ್ದು ಈಗ ಇತಿಹಾಸ," ಎಂದು ರಮಣಗೌಡ ವಿ. ನಾಡಗೌಡ ಮಾಹಿತಿ ನೀಡಿದರು.

ಯು.ಆರ್ ರಾವ್ ಉಪಗ್ರಹ ಕೇಂದ್ರದ ವಿಜ್ಞಾನಿ ಡಾ. ರಾಘವೇಂದ್ರ ಬಿ. ಕುಲಕರ್ಣಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಎನ್‌ಐಎಸ್‌ಎಆರ್ ಯೋಜನಾ ನಿರ್ದೇಶಕ ಸಿ.ವಿ. ಶ್ರೀಕಾಂತ್, ಬಿಐಇಟಿ ನಿರ್ದೇಶಕ ಪ್ರೊ. ವೈ. ವೃಷಬೇಂದ್ರಪ್ಪ, ಡಿಡಿಪಿಐ ಬಿ. ಕೊಟ್ರೇಶ್, ಪ್ರಿನ್ಸಿಪಾಲ್ ಡಾ.ಎಚ್.ಬಿ. ಅರವಿಂದ್, ಡಾ.ಸಿ.ಆರ್. ನಿರ್ಮಲಾ, ಕೆ.ಎಂ. ನರೇಶ್ ಪಾಟೀಲ್, ಯು.ಆರ್ ರಾವ್ ಉಪಗ್ರಹ ಕೇಂದ್ರದ 15ಕ್ಕೂ ಹೆಚ್ಚು ವಿಜ್ಞಾನಿಗಳು ಭಾಗವಹಿಸಿದ್ದರು.

ಪ್ರಜಾವಾಣಿ ಭಾನುವಾರ • ಅಕ್ಟೋಬರ್ 8, 2023

BIET LIBRARY

ಬಿಐಇಟಿ ಕಾಲೇಜಿನ ಎಸ್.ಎಸ್. ಸಾಂಸ್ಕೃತಿಕ ಭವನದಲ್ಲಿ 'ವಿಶ್ವ ಅಂತರಿಕ್ಷ ಸಪ್ತಾಹ'

# 'ಸತತ ಪ್ರಯತ್ನದಿಂದ ಸಾಧನೆ ಸಾಧ್ಯ'

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ಸೋಲಿನಿಂದ ಧೃತಿಗೆಡದ ಸತತವಾಗಿ ಪ್ರಯತ್ನಿಸಿದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಕೈಗೊಂಡ 'ಚಂದ್ರಯಾನ-3' ಯಶಸ್ಸು ಒಂದು ಸ್ಪಷ್ಟ ನಿದರ್ಶನ' ಎಂದು ಇಸ್ರೊದ ಯು.ಆರ್.ರಾವ್ ಉಪಗ್ರಹ ಕೇಂದ್ರದ ಇಂಟಿಗ್ರೇಷನ್ ಆ್ಯಂಡ್ ಚೆಕ್‌ಔಟ್ ಏರಿಯಾ ಉಪನಿರ್ದೇಶಕ ರಾಮನಗೌಡ ವಿ. ನಾಡಗೌಡ ಹೇಳಿದರು.

ನಗರದ ಬಿಐಇಟಿ ಕಾಲೇಜಿನ ಎಸ್.ಎಸ್. ಸಾಂಸ್ಕೃತಿಕ ಭವನದಲ್ಲಿ ಶನಿವಾರ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಇಸ್ರೋದ ಯು.ಆರ್.ರಾವ್ ಉಪಗ್ರಹ ಕೇಂದ್ರದ ಸಹಯೋಗದಲ್ಲಿ ನಡೆದ 'ವಿಶ್ವ ಅಂತರಿಕ್ಷ ಸಪ್ತಾಹ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಾರ್ವಜನಿಕರಿಗೆ ನೇರವಾಗಿ ಉಪಯೋಗವಾಗುವ ಕಾರ್ಯಗಳನ್ನು ಇಸ್ರೊ ಮಾಡುತ್ತದೆ. ಹೀಗಾಗಿ ಸಂಸ್ಥೆಯಲ್ಲಿನ ಪ್ರತಿಯೊಬ್ಬರೂ ಸಂತೋಷದಿಂದ ಕೆಲಸ ಮಾಡುತ್ತಾರೆ. ಅದೇ ರೀತಿ ವಿಜ್ಞಾನ ಮತ್ತು ತಂತ್ರಜ್ಞಾನ, ಆವಿಷ್ಕಾರಗಳ ಮೂಲ ಉದ್ದೇಶ ನಾವೆಲ್ಲರೂ ನೆಮ್ಮದಿ, ಸಂತೋಷದಿಂದ ಇರಬೇಕು ಎಂಬುದೇ ಆಗಿದೆ ಎಂದು ಹೇಳಿದರು.

'ಇಸ್ರೊದಲ್ಲಿ ಅಧಿಕಾರಿ-ಸಿಬ್ಬಂದಿ ನಡುವೆ ಮೇಲು, ಕೀಳೆಂಬ ಭೇದವಿಲ್ಲ. ಎಲ್ಲರೂ ಒಂದೇ ತಂಡವಾಗಿ ಕೆಲಸ ಮಾಡುವುದರಿಂದ ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಇಷ್ಟೊಂದು ಸಾಧನೆ ಮಾಡಲು ಸಾಧ್ಯವಾಗಿದೆ' ಎಂದು ಹೇಳಿದರು.

ಯು.ಆರ್ ರಾವ್ ಉಪಗ್ರಹ ಕೇಂದ್ರದ ವಿಜ್ಞಾನಿ ರಾಘವೇಂದ್ರ ಬಿ. ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು. ಎನ್‌ಐಎಸ್‌ಎಆರ್ ಯೋಜನಾ ನಿರ್ದೇಶಕ ಸಿ.ವಿ. ಶ್ರೀಕಾಂತ್, ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಬೇಂದ್ರಪ್ಪ, ಡಿಡಿಪಿಐ ಬಿ. ಕೊಟ್ರೇಶ್, ಪ್ರಾಂಶುಪಾಲ ಎಚ್.ಬಿ. ಅರವಿಂದ್, ಸಿ.ಆರ್. ನಿರ್ಮಲಾ, ಕೆ.ಎಂ. ನರೇಶ್ ಪಾಟೀಲ್, ಯು.ಆರ್ ರಾವ್ ಉಪಗ್ರಹ ಕೇಂದ್ರದ 15ಕ್ಕೂ ಹೆಚ್ಚು ವಿಜ್ಞಾನಿಗಳು ಭಾಗವಹಿಸಿದ್ದರು.

ವಿದ್ಯಾರ್ಥಿಗಳಲ್ಲಿ ಅಂತರಿಕ್ಷ ವಿಜ್ಞಾನ ಮತ್ತು ದೇಶಿ ತಂತ್ರಜ್ಞಾನಗಳ ಮೇಲಿನ ಆಸಕ್ತಿ ಹೆಚ್ಚಿಸಲು ಇಸ್ರೊದ ಕೃತಕ ಉಪಗ್ರಹಗಳು, ಉಡಾವಣೆ ಯಂತ್ರ ಹಾಗೂ ಬಾಹ್ಯಾಕಾಶ ಉಪಕರಣಗಳ ವಸ್ತು ಪ್ರದರ್ಶನವನ್ನೂ ಆಯೋಜಿಸಲಾಗಿತ್ತು.



ದಾವಣಗೆರೆಯ ಬಿಐಇಟಿ ಕಾಲೇಜಿನಲ್ಲಿ ಶನಿವಾರ ನಡೆದ 'ವಿಶ್ವ ಅಂತರಿಕ್ಷ ಸಪ್ತಾಹ' ಕಾರ್ಯಕ್ರಮದಲ್ಲಿ 'ಚಂದ್ರಯಾನ –3'ರ ಮಾದರಿಯನ್ನು ಕುತೂಹಲದಿಂದ ವೀಕ್ಷಿಸಿದ ವಿದ್ಯಾರ್ಥಿನಿಯರು

## ಕಡಿಮೆ ವೆಚ್ಚದಲ್ಲಿ ಮಹತ್ತರ ಸಾಧನೆ: ರಾಮನಗೌಡ ವಿ. ನಾಡಗೌಡ

'ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ಅತ್ಯಂತ ಕಡಿಮೆ ವೆಚ್ಚದಲ್ಲಿ ಮಹತ್ತರವಾದುದನ್ನು ಸಾಧಿಸುವುದು ಇಸ್ರೊ ವಿಶೇಷತೆ' ಎಂದು ರಾಮನಗೌಡ ವಿ. ನಾಡಗೌಡ ತಿಳಿಸಿದರು.

'2018ರಲ್ಲಿ ದೇಶದ ಭದ್ರತೆ ದೃಷ್ಟಿಯಿಂದ ಗಡಿ ಕಣ್ಗಾವಲಿಗೆ ಭಾರತಕ್ಕೆ ಮೂರು ಅತ್ಯುನ್ನತ ತಂತ್ರಜ್ಞಾನದ ಉಪಗ್ರಹಗಳ ಅಗತ್ಯವಿತ್ತು. ಆಗ ಆ ತಂತ್ರಜ್ಞಾನ ಇದ್ದದ್ದು ಇಸ್ರೇಲ್ ಬಳಿ ಮಾತ್ರ. ಅಂದಿನ ಇಸ್ರೊ ಅಧ್ಯಕ್ಷ ಶಿವನ್ ಅವರು ಇಸ್ರೇಲ್ ಬಾಹ್ಯಾಕಾಶ ಸಂಸ್ಥೆ ಮುಖ್ಯಸ್ಥರನ್ನು ಕರೆಸಿ ಉಪಗ್ರಹ ತಯಾರಿ ಕುರಿತು ಚರ್ಚಿಸಿದ್ದರು' ಎಂದರು.

'ಒಂದು ವರ್ಷದಲ್ಲಿ 3 ಉಪಗ್ರಹಗಳನ್ನು ಸಿದ್ಧಪಡಿಸಬೇಕು ಎಂಬುದು ನಮ್ಮ ಬೇಡಿಕೆಯಾಗಿತ್ತು. ಆದರೆ, ಉಪಗ್ರಹ ತಯಾರಿಗೆ ಕನಿಷ್ಠ 4 ವರ್ಷ ಬೇಕು, ತಲಾ ₹ 4,000 ಕೋಟಿಯಂತೆ 3 ಉಪಗ್ರಹಗಳಿಗೆ ಒಟ್ಟು ₹12,000 ಕೋಟಿ ವೆಚ್ಚವಾಗಲಿದೆ ಎಂದು ಇಸ್ರೇಲ್ ವಿಜ್ಞಾನಿ ತಿಳಿಸಿದರು. ಬಳಿಕ ಅದೇ ಕಾರ್ಯವನ್ನು ಭಾರತದ ವಿಜ್ಞಾನಿಗಳು 2 ವರ್ಷಗಳಲ್ಲಿ ಕೇವಲ ₹1,000 ಕೋಟಿ ವೆಚ್ಚದಲ್ಲಿ ಮಾಡಿ ಮುಗಿಸಿದ್ದು ಈಗ ಇತಿಹಾಸ' ಎಂದು ವಿವರಿಸಿದರು.

ನಗರದಲ್ಲಿ ಇಂದು

DVG 2



UDAYAVANI 08-10-2023 BIET LIBRARY

# ಕಡಿಮೆ ವೆಚ್ಚದಲ್ಲಿ ಉತ್ತಮ ಕಾರ್ಯ ಇಸ್ರೋ ವೈಶಿಷ್ಟ್ಯತೆ

## ಸೋಲಿನಿಂದ ಧೃತಿಗೆಡದೆ ಸತತ ಪ್ರಯತ್ನ ಮಾಡಿದರೆ ಏನನ್ನು ಬೇಕಾದರೂ ಸಾಧಿಸಬಹುದು: ರಮಣಗೌಡ

ದಾವಣಗೆರೆ: ಯಾವುದೇ ಉಪಗ್ರಹ, ತಂತ್ರಜ್ಞಾನಗಳನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಪರಿಣಾಮಕಾರಿಯಾಗಿ ನಿರ್ಮಿಸುವುದು ಹಾಗೂ ನಿರ್ವಹಿಸುವುದು ಇಸ್ರೋ ಸಂಸ್ಥೆಯ ವೈಶಿಷ್ಟ್ಯಗಳಲ್ಲೊಂದಾಗಿದೆ ಎಂದು ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೋದ ಯು.ಆರ್ ರಾವ್ ಉಪಗ್ರಹ ಕೇಂದ್ರದ ಇಂಟೆಗ್ರೇಷನ್ ಅ್ಯಂಡ್ ಚೆಕ್‌ಔಟ್ ವಿಭಾಗದ ಉಪನಿರ್ದೇಶಕ ರಮಣಗೌಡ ನಾಡಗೌಡ ತಿಳಿಸಿದರು.

ನಗರದ ಬಿಐಇಟಿ ಕಾಲೇಜಿನ ಎಸ್ಎಸ್ ಸಾಂಸ್ಕೃತಿಕ ಭವನದಲ್ಲಿ ಶನಿವಾರ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಇಸ್ರೋದ ಯು.ಆರ್ ರಾವ್ ಉಪಗ್ರಹ ಕೇಂದ್ರದ ಸಹಯೋಗದಲ್ಲಿ ನಡೆದ ವಿಶ್ವ ಅಂತರಿಕ್ಷ ಸಪ್ತಾಹದಲ್ಲಿ ಅವರು ಮಾತನಾಡಿದರು.

ದೇಶದ ಭದ್ರತೆ ದೃಷ್ಟಿಯಿಂದ ಗಡಿ ಗಸ್ತುವರಿಗೆ 2018ರಲ್ಲಿ ಭಾರತಕ್ಕೆ ಮೂರು ಅತ್ಯುನ್ನತ ತಂತ್ರಜ್ಞಾನದ ಉಪಗ್ರಹಗಳ ಅಗತ್ಯವಿತ್ತು. ಆದರೆ ಆಗ ಆ ತಂತ್ರಜ್ಞಾನ ಇದ್ದದ್ದು ಇಸ್ರೇಲ್ ಬಳಿ ಮಾತ್ರ. ಉಪಗ್ರಹ ತಯಾರಿಗೆ ಕನಿಷ್ಠ 4 ವರ್ಷ ಬೇಕು, ತಲಾ 4,000 ಕೋಟಿ ರೂ.ನಂತೆ ಮೂರು ಉಪಗ್ರಹಗಳಿಗೆ ಒಟ್ಟು 12,000ರೂ. ವೆಚ್ಚವಾಗಲಿದೆ ಎಂದು ಇಸ್ರೇಲ್ ವಿಜ್ಞಾನಿ ತಿಳಿಸಿದ್ದರು. ಬಳಿಕ ಅದೇ ಕಾರ್ಯವನ್ನು ಭಾರತದ ವಿಜ್ಞಾನಿಗಳು ಎರಡು ವರ್ಷಗಳಲ್ಲಿ ಕೇವಲ 1000 ಕೋಟಿ ರೂ. ವೆಚ್ಚದಲ್ಲಿ ಮಾಡಿ ಮುಗಿಸಿದರು. ಇದು ಇಸ್ರೋದ ಕಡಿಮೆ ವೆಚ್ಚದ ಕೆಲಸಕ್ಕೆ ಇದಕ್ಕೆ ತಾಜಾ ಉದಾಹರಣೆ ಎಂದರು.

ಸೋಲಿನಿಂದ ಧೃತಿಗೆಡದೆ ಸತತ ಪ್ರಯತ್ನ ಮಾಡಿದರೆ ಏನನ್ನುಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಯಶಸ್ವಿಯಾಗಿ ಕೈಗೊಂಡ 'ಚಂದ್ರಯಾನ-3' ಒಂದು ನಿದರ್ಶನ ಎಂದರು.

ಇಸ್ರೋದಲ್ಲಿ ಕೆಲಸ ಮಾಡಲು ಒಳ್ಳೆಯ ವಾತಾವರಣವಿದೆ. ಅಲ್ಲಿ ಅಧಿಕಾರಿ-ಸಿಬ್ಬಂದಿ ನಡುವೆ ಮೇಲು, ಕೀಳಿಲ್ಲ, ಎಲ್ಲರೂ ಒಂದು ತಂಡವಾಗಿ ಕೆಲಸ ಮಾಡುವುದರಿಂದಲೇ ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಇಷ್ಟೊಂದು ವಿಕ್ರಮಗಳನ್ನು ಸಾಧಿಸಲು ಸಾಧ್ಯವಾಗಿದೆ ಎಂದರು. ಯು.ಆರ್ ರಾವ್ ಉಪಗ್ರಹ ಕೇಂದ್ರದ ವಿಜ್ಞಾನಿ ಡಾ| ರಾಘವೇಂದ್ರ ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು. ಎನ್‌ಐಎಸ್‌ಎಆರ್ ಯೋಜನಾ ನಿರ್ದೇಶಕ ಸಿ.ವಿ. ಶ್ರೀಕಾಂತ್, ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಡಿಡಿಒ ಬಿ. ಕೊಟ್ರೇಶ್, ಪ್ರಾಂಶುಪಾಲ ಡಾ| ಎಚ್.ಬಿ. ಅರವಿಂದ್, ಡಾ| ಸಿ.ಆರ್. ನಿರ್ಮಲಾ, ಕೆ.ಎಂ. ನರೇಶ್ ಪಾಟೀಲ್, ಯು.ಆರ್. ರಾವ್ ಉಪಗ್ರಹ ಕೇಂದ್ರದ 15ಕ್ಕೂ ಹೆಚ್ಚು ವಿಜ್ಞಾನಿಗಳು ಕಾರ್ಯಕ್ರಮದಲ್ಲಿ ಇದ್ದರು.



ದಾವಣಗೆರೆ: ವಿಶ್ವ ಅಂತರಿಕ್ಷ ಸಪ್ತಾಹ ಕಾರ್ಯಕ್ರಮವನ್ನು ಇಸ್ರೋ ವಿಜ್ಞಾನಿ ರಮಣಗೌಡ ವಿ. ನಾಡಗೌಡ ಉದ್ಘಾಟಿಸಿದರು.

### ನೆಮ್ಮದಿ ಮುಖ್ಯ: ರಮಣಗೌಡ

ವಿಜ್ಞಾನ ಮತ್ತು ತಂತ್ರಜ್ಞಾನ, ಆವಿಷ್ಕಾರಗಳ ಮೂಲ ಉದ್ದೇಶ ನಾವೆಲ್ಲರೂ ನೆಮ್ಮದಿ, ಸಂತೋಷದಿಂದ ಇರಬೇಕು ಎಂಬುದೇ ಆಗಿದೆ. ಮನುಷ್ಯನಿಗೆ ಮುಖ್ಯವಾಗಿ ಒಳ್ಳೆಯ ಸಂಸ್ಕೃತಿ, ಸಂಸ್ಕಾರ ಇರಬೇಕು. ಆಗ ಕೆಲಸ ಮಾಡಲು ಮನೋಬಲ ಸಿಗುತ್ತದೆ. ಆತ್ಮವಿಶ್ವಾಸ ಹೆಚ್ಚುತ್ತದೆ. ಜತೆಗೆ ಇನ್ನೂ ಹೆಚ್ಚಿನ ಸಾಧನೆ ಮಾಡಲು ಪ್ರೇರಣೆ ಸಿಗುತ್ತದೆ. ಅದು ಇಲ್ಲದಿದ್ದರೆ ಏನೇ ಇದ್ದರೂ, ಎಷ್ಟೇ ಇದ್ದರೂ ಮನಸ್ಸಿಗೆ ಸಮಾಧಾನ ಇರುವುದಿಲ್ಲ ಎಂದು ರಮಣಗೌಡ ವಿ. ನಾಡಗೌಡ ಹೇಳಿದರು.

BIET LIBRARY
08-10-2023

ವಿಶ್ವ ಅಂತರಿಕ್ಷ ಸಪ್ತಾಹ ಕಾರ್ಯಕ್ರಮ । ಒಳ್ಳೆಯ ಮನೋಭಾವ, ಗುರು ಹಿರಿಯರಿಗೆ ಗೌರವ ಕೊಡುವ ಗುಣ ಬೆಳೆಸಿಕೊಳ್ಳಿ

# ಸತತ ಪ್ರಯತ್ನ ಇದ್ದರೆ ಸಾಧನೆ ಸಾಧ್ಯ

■ ವಿಕ ಸುದ್ದಿಲೋಕ ದಾವಣಗೆರೆ

''ಸೋಲಿನಿಂದ ಧೃತಿಗೆಡದೆ ಸತತ ಪ್ರಯತ್ನ ಮಾಡಿದರೆ ಏನನ್ನುಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಕೈಗೊಂಡ 'ಚಂದ್ರಯಾನ-3' ಯಶಸ್ಸು ಒಂದು ಸ್ಪಷ್ಟ ನಿದರ್ಶನ,'' ಎಂದು ಇಸ್ರೋದ ಯು. ಆರ್. ರಾವ್ ಉಪಗ್ರಹ ಕೇಂದ್ರದ ಇಂಟಿಗ್ರೇಷನ್ ಅಂಡ್ ಚೆಕ್ ಔಟ್ ಏರಿಯಾ ಉಪನಿರ್ದೇಶಕ ರಮಣಗೌಡ ವಿ. ನಾಡಗೌಡ ಹೇಳಿದರು.

ನಗರದ ಬಿಐಇಟಿ ಕಾಲೇಜಿನ ಎಸ್‌ಎಸ್ ಸಂಸ್ಕೃತಿಕ ಭವನದಲ್ಲಿ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಇಸ್ರೋದ ಯು.ಆರ್ ರಾವ್ ಉಪಗ್ರಹ ಕೇಂದ್ರದ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಶ್ವ ಅಂತರಿಕ್ಷ ಸಪ್ತಾಹ ಕಾರ್ಯಕ್ರಮದಲ್ಲಿ ಮಾತನಾಡಿ, ಮಾಡೇ ಮಾಡುತ್ತೇನೆ ಎಂಬ ಛಲವಿದ್ದರೆ ಏನನ್ನಾದರೂ ಸಾಧಿಸಬಹುದು ಎಂದರು.

ಒಳ್ಳೆಯ ಮನೋಭಾವ, ಗುರು ಹಿರಿಯರಿಗೆ ಗೌರವ ನೀಡುವ ಗುಣ ಬೆಳೆಸಿಕೊಳ್ಳಬೇಕು. ಇಂತಹ ಗುಣಗಳನ್ನು ಬೆಳೆಸಿಕೊಂಡಾಗ ಒಳ್ಳೆ ರೀತಿಯಲ್ಲಿ ಕೆಲಸ ಮಾಡಲು ಮನೋಬಲ ಸಿಗುತ್ತದೆ. ಆತ್ಮವಿಶ್ವಾಸ ಹೆಚ್ಚುತ್ತದೆ. ಜತೆಗೆ ಇನ್ನೂ ಹೆಚ್ಚಿನ ಸಾಧನೆ ಮಾಡಲು ಪ್ರೇರಣೆ ಸಿಕ್ಕಂತಾಗುತ್ತದೆ. ಇಸ್ರೋದಲ್ಲಿ ಈ ರೀತಿಯ ವಾತಾವರಣವಿದೆ. ಅಲ್ಲಿ ಅಧಿಕಾರಿ-ಸಿಬ್ಬಂದಿ ನಡುವೆ ಮೇಲು, ಕೀಳೆಂಬುದಿಲ್ಲ, ಎಲ್ಲರೂ ಒಂದೇ ತಂಡವಾಗಿ ಕೆಲಸ ಮಾಡುವುದರಿಂದಲೇ ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಇಷ್ಟೊಂದು ವಿಕ್ರಮಗಳನ್ನು ಸಾಧಿಸಲು ಸಾಧ್ಯವಾಗಿದೆ ಎಂದು ಹೇಳಿದರು.

ಯು.ಆರ್ ರಾವ್ ಉಪಗ್ರಹ ಕೇಂದ್ರದ ವಿಜ್ಞಾನಿ ಡಾ. ರಾಘವೇಂದ್ರ ಬಿ. ಕುಲಕರ್ಣಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಎನ್‌ಐಎಸ್‌ಎಆರ್ ಯೋಜನಾ ನಿರ್ದೇಶಕ ಸಿ.ವಿ. ಶ್ರೀಕಾಂತ್, ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಬೇಂದ್ರಪ್ಪ, ಡಿಡಿಪಿಐ ಬಿ. ಕೊಟ್ರೇಶ್, ಪ್ರಿನ್ಸಿಪಾಲ್ ಡಾ.ಎಚ್.ಬಿ. ಅರವಿಂದ್, ಡಾ.ಸಿ.ಆರ್. ನಿರ್ಮಲಾ, ಕೆ.ಎಂ. ನರೇಶ್ ಪಾಟೀಲ್, ಯು.ಆರ್ ರಾವ್ ಉಪಗ್ರಹ ಕೇಂದ್ರದ 15ಕ್ಕೂ ಹೆಚ್ಚು ವಿಜ್ಞಾನಿಗಳು ಭಾಗವಹಿಸಿದ್ದರು.

## ಇಸ್ರೋದಲ್ಲಿ ನೋ ಬಾಸಿಸಂ!

''ಇಸ್ರೋ ಆರಂಭವಾದಾಗಿನಿಂದ ಮುಖ್ಯಸ್ಥರಾಗಿ ಇರುವವರೆಗೂ ಸಾಕಷ್ಟು ಜನ ಕಾರ್ಯ ನಿರ್ವಹಿಸಿದ್ದಾರೆ. ಅವರೆಲ್ಲರೂ ಎಂದಿಗೂ ತಾವು ಮುಖ್ಯಸ್ಥರು ಎಂಬ ಅಹಂನಿಂದ ವರ್ತಿಸಿಲ್ಲ. ಪ್ರತಿಯೊಬ್ಬರೂ ಅತ್ಯಂತ ಸರಳ ವ್ಯಕ್ತಿತ್ವದ ಮುಖ್ಯಸ್ಥರೇ. ಇಂತಹ ಮುಂದಾಳುಗಳನ್ನು ಪಡೆದಿರುವುದು ಇಸ್ರೋದ ಅದೃಷ್ಟ. ಹಾಗೇ ಎಲ್ಲ ಮುಖ್ಯಸ್ಥರು ಕೂಡ ಪ್ರತಿ ಯೋಜನೆ, ಉಡಾವಣೆ ಸಮಯದಲ್ಲಿ ತಂಡದ ಜತೆ ಬೆರೆತು ತಾವೂ ತಂಡದ ಒಬ್ಬ ಸದಸ್ಯರಾಗಿ ಕೆಲಸ ನಿರ್ವಹಿಸಿದ್ದಾರೆ. ಹೀಗಾಗಿ ಇಸ್ರೋದಲ್ಲಿ ಎಂದಿಗೂ ಬಾಸಿಸಂ ಇಲ್ಲ, ಅಲ್ಲಿರುವುದು ಅತ್ಯಂತ ಸ್ಪಷ್ಟ, ಪರಿಶುದ್ಧವಾದ ನಾಯಕತ್ವ ಮಾತ್ರ'' ಎಂದು ರಮಣಗೌಡ ತಿಳಿಸಿದರು.



ದಾವಣಗೆರೆ ಬಾಪೂಜಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ ವಿಶ್ವ ಅಂತರಿಕ್ಷ ಸಪ್ತಾಹ ಕಾರ್ಯಕ್ರಮವನ್ನು ಇಸ್ರೋ ವಿಜ್ಞಾನಿ ರಮಣಗೌಡ ವಿ. ನಾಡಗೌಡ ಉದ್ಘಾಟಿಸಿದರು. ಡಾ. ರಾಘವೇಂದ್ರ ಬಿ. ಕುಲಕರ್ಣಿ, ಸಿ.ವಿ. ಶ್ರೀಕಾಂತ್, ಪ್ರೊ.ವೈ. ವೃಷಬೇಂದ್ರಪ್ಪ, ಡಿಡಿಪಿಐ ಬಿ. ಕೊಟ್ರೇಶ್, ಡಾ.ಎಚ್.ಬಿ. ಅರವಿಂದ್ ಇತರರಿದ್ದರು.

## ಕಡಿಮೆ ವೆಚ್ಚ ಇಸ್ರೋ ವೈಶಿಷ್ಟ್ಯ

''ಯಾವುದೇ ಉಪಗ್ರಹ, ತಂತ್ರಜ್ಞಾನಗಳನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಪರಿಣಾಮಕಾರಿಯಾಗಿ ನಿರ್ವಹಿಸುವುದು, ನಿರ್ಮಿಸುವುದು ಇಸ್ರೋ ವೈಶಿಷ್ಟ್ಯಗಳಲ್ಲಿ ಒಂದು. 2018ರಲ್ಲಿ ದೇಶದ ಭದ್ರತೆ ದೃಷ್ಟಿಯಿಂದ ಗಡಿ ಗಸ್ತಾವಲಿಗೆ ಭಾರತಕ್ಕೆ ಮೂರು ಅತ್ಯುನ್ನತ ತಂತ್ರಜ್ಞಾನದ ಉಪಗ್ರಹಗಳ ಅಗತ್ಯವಿತ್ತು. ಆದರೆ ಆಗ ಆ ತಂತ್ರಜ್ಞಾನ ಇದ್ದದ್ದು ಇಸ್ರೇಲ್ ಬಳಿ ಮಾತ್ರ. ಅಂದು ಇಸ್ರೋ ಅಧ್ಯಕ್ಷರಾಗಿದ್ದ ಶಿವನ್ ಅವರು ಇಸ್ರೇಲ್ ಬಾಹ್ಯಾಕಾಶ ಸಂಸ್ಥೆ ಮುಖ್ಯಸ್ಥರನ್ನು ಕರೆಸಿ ಉಪಗ್ರಹ ತಯಾರಿ ಕುರಿತು ಚರ್ಚಿಸಿದ್ದರು. ಒಂದು ವರ್ಷದಲ್ಲಿ ಮೂರು ಉಪಗ್ರಹಗಳನ್ನು ಸಿದ್ಧಪಡಿಸಬೇಕು ಎಂಬುದು ನಮ್ಮ ಬೇಡಿಕೆಯಾಗಿತ್ತು. ಆದರೆ ಉಪಗ್ರಹ ತಯಾರಿಗೆ ಕನಿಷ್ಠ 4 ವರ್ಷ ಬೇಕು, ತಲಾ 4,000 ಕೋಟಿ ರೂ.ನಂತೆ ಮೂರು ಉಪಗ್ರಹಗಳಿಗೆ ಒಟ್ಟು 12,000 ವೆಚ್ಚವಾಗಲಿದೆ ಎಂದು ಇಸ್ರೇಲ್ ವಿಜ್ಞಾನಿ ತಿಳಿಸಿದರು. ಬಳಿಕ ಅದೇ ಕಾರ್ಯವನ್ನು ಭಾರತದ ವಿಜ್ಞಾನಿಗಳು ಎರಡು ವರ್ಷದಲ್ಲಿ ಕೇವಲ 1000 ಕೋಟಿ ರೂ.ವೆಚ್ಚದಲ್ಲಿ ಮಾಡಿ ಮುಗಿಸಿದ್ದು ಈಗ ಇತಿಹಾಸ,'' ಎಂದು ರಮಣಗೌಡ ಮಾಹಿತಿ ನೀಡಿದರು.

# ಗುರು- ಹಿರಿಯರಿಗೆ ಗೌರವದಿಂದ ಮನೋಬಲ ವೃದ್ಧಿ

## ವಿಶ್ವ ಅಂತರಿಕ್ಷ ಸಪ್ತಾಹ ಕಾರ್ಯಕ್ರಮದಲ್ಲಿ ಇಸ್ರೋದ ರಮಣಗೌಡ ನಾಡಗೌಡ ಅಭಿಪ್ರಾಯ

09-10-2023
BIET LIBRARY

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ವಿದ್ಯಾರ್ಥಿಗಳು ಉತ್ತಮ ಮನೋಭಾವ, ಗುರು-ಹಿರಿಯರಿಗೆ ಗೌರವ ನೀಡುವ ಗುಣ ಬೆಳೆಸಿಕೊಳ್ಳಬೇಕು. ಇಂತಹ ಗುಣಗಳ ಬೆಳೆಸಿಕೊಂಡಾಗ ಉತ್ತಮ ಕೆಲಸಕ್ಕೆ ಮನೋಬಲಸಿಗುತ್ತದೆಎಂದುಇಸ್ರೋಯು.ಆರ್.ರಾವ್ ಉಪಗ್ರಹ ಕೇಂದ್ರದ ಇಂಟೆಗ್ರೇಷನ್ ಅಂಡ್ ಚೆಕ್ ಔಟ್ ಏರಿಯಾ ಉಪ ನಿರ್ದೇಶಕ ರಮಣಗೌಡ ವಿ.ನಾಡಗೌಡ ತಿಳಿಸಿದರು.

ನಗರದ ಬಿಐಇಟಿ ಕಾಲೇಜಿನ ಎಸ್.ಎಸ್.ಸಾಂಸ್ಕೃತಿಕ ಭವನದಲ್ಲಿ ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಇಸ್ರೋದ ಯು.ಆರ್.ರಾವ್ ಉಪಗ್ರಹಕೇಂದ್ರದಸಹಯೋಗದಲ್ಲಿನಡೆದವಿಶ್ವಅಂತರಿಕ್ಷ ಸಪ್ತಾಹ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇಸ್ರೋದಲ್ಲಿ ಅಧಿಕಾರಿ, ಸಿಬ್ಬಂದಿ ನಡುವೆ ಮೇಲು, ಕೀಳು ಎಂಬ ಭಾವನೆ ಇಲ್ಲ. ಎಲ್ಲರೂ ತಂಡವಾಗಿ ಕೆಲಸ ಮಾಡುವುದರಿಂದಲೇ ಭಾರತ ಭಾಹ್ಯಾಕಾಶ ಕ್ಷೇತ್ರದಲ್ಲಿ ಇಷ್ಟೊಂದು ವಿಕ್ರಮಗಳ ಸಾಧಿಸಲು ಸಾಧ್ಯವಾಗಿದೆ ಎಂದರು.

ಸೋಲಿನಿಂದ ಧೃತಿಗೆಡದೆ ಸತತ ಪ್ರಯತ್ನದಿಂದ ಏನೂ ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಭಾರತೀಯಬಾಹ್ಯಾಕಾಶಸಂಶೋಧನಾಸಂಸ್ಥೆಕೈಗೊಂಡ ಚಂದ್ರಯಾನ 3 ಯಶಸ್ಸು ಒಂದು ಸ್ಪಷ್ಟ ನಿದರ್ಶನ ಎಂದರು. ಈ ವರೆಗಿನ ಇಸ್ರೋ ಮುಖ್ಯಸ್ಥರಲ್ಲಿ ಯಾರೂ ಅಹಂನಿಂದವರ್ತಿಸಿಲ್ಲ. ಪ್ರತಿಯೊಬ್ಬರೂಅತ್ಯಂತಸರಳ ವ್ಯಕ್ತಿತ್ವದಮುಂದಾಳುಗಳಾಗಿಪಡೆದಿರುವುದುಇಸ್ರೋದ ಅದೃಷ್ಟ. ಹಾಗೆ ಎಲ್ಲಾ ಮುಖ್ಯಸ್ಥರು ಪ್ರತಿ ಯೋಜನೆ, ಉಡಾವಣೆ ಸಮಯದಲ್ಲಿ ತಂಡದ ಜೊತೆಗೆ ಬೆರೆತು ತಾವೂತಂಡದಒಬ್ಬಸದಸ್ಯರಾಗಿಕೆಲಸನಿರ್ವಹಿಸಿದ್ದಾರೆ ಎಂದರು.



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ನಡೆದ ವಿಶ್ವ ಅಂತರಿಕ್ಷ ಸಪ್ತಾಹ ಕಾರ್ಯಕ್ರಮವನ್ನು ಇಸ್ರೋದ ರಮಣಗೌಡ ವಿ.ನಾಡಗೌಡ ಉದ್ಘಾಟಿಸಿದರು.

ಯು.ಆರ್.ರಾವ್ ಉಪಗ್ರಹ ಕೇಂದ್ರದ ವಿಜ್ಞಾನಿ ಡಾ.ರಾಘವೇಂದ್ರ ಕುಲಕರ್ಣಿ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎನ್ಐಎಸ್ಎಆರ್ ಯೋಜನಾ ನಿರ್ದೇಶಕ ಸಿ.ವಿ.ಶ್ರೀಕಾಂತ್, ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ.ವೈ.ವೃಷಭೇಂದ್ರಪ್ಪ, ಡಿಡಿಪಿಐ ಬಿ.ಕೊಟ್ರೇಶ, ಪ್ರಾಚಾರ್ಯ ಡಾ.ಎಚ್.ಬಿ.ಅರವಿಂದ್, ಡಾ.ಸಿ.ಆರ್.ನಿರ್ಮಲಾ, ಕೆ.ಎಂ.ನರೇಶ ಪಾಟೀಲ್, ಯು.ಆರ್.ರಾವ್ ಉಪಗ್ರಹ ಕೇಂದ್ರದ ವಿಜ್ಞಾನಿಗಳು, ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ವಿದ್ಯಾರ್ಥಿಗಳಿದ್ದರು.

BIET LIBRARY



SAMYUKTA KARNATAKA

# ಸೋಲಿನಿಂದ ಧೃತಿಗೆಡದೆ ಪ್ರಯತ್ನಿಸಿದರೆ ಸಾಧನೆ ಸಾಧ್ಯ

ದಾವಣಗೆರೆ: ಸೋಲಿನಿಂದ ಧೃತಿಗೆಡದೆ ಸತತವಾಗಿ ಪ್ರಯತ್ನಿಸಿದರೆ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಕೈಗೊಂಡ 'ಚಂದ್ರಯಾನ-3' ಯಶಸ್ಸು ಒಂದು ಸ್ಪಷ್ಟ ನಿದರ್ಶನ ಎಂದು ಇಸ್ರೊದ ಯು.ಆರ್.ರಾವ್ ಉಪಗ್ರಹ ಕೇಂದ್ರದ ಇಂಟಿಗ್ರೇಷನ್ ಆ್ಯಂಡ್ ಚೆಕ್‌ಔಟ್ ಏರಿಯಾ ಉಪನಿರ್ದೇಶಕ ರಾಮನಗೌಡ ವಿ.ನಾಡಗೌಡ ಹೇಳಿದರು.

ನಗರದ ಬಿಐಇಟಿ ಕಾಲೇಜಿನ ಎಸ್.ಎಸ್. ಸಾಂಸ್ಕೃತಿಕ ಭವನದಲ್ಲಿ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ, ಇಸ್ರೋದ ಯು.ಆರ್.ರಾವ್ ಉಪಗ್ರಹ ಕೇಂದ್ರದ ಸಹಯೋಗದಲ್ಲಿ ನಡೆದ 'ವಿಶ್ವ ಅಂತರಿಕ್ಷ ಸಪ್ತಾಹ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾರ್ವಜನಿಕರಿಗೆ ನೇರವಾಗಿ ಉಪಯೋಗವಾಗುವ ಕಾರ್ಯಗಳನ್ನು ಇಸ್ರೋ ಮಾಡುತ್ತದೆ. ಹೀಗಾಗಿ ಸಂಸ್ಥೆಯಲ್ಲಿನ ಪ್ರತಿಯೊಬ್ಬರೂ ಸಂತೋಷದಿಂದ ಕೆಲಸ ಮಾಡುತ್ತಾರೆ. ಅದೇ ರೀತಿ ವಿಜ್ಞಾನ ಮತ್ತು ತಂತ್ರಜ್ಞಾನ, ಆವಿಷ್ಕಾರಗಳ ಮೂಲ ಉದ್ದೇಶ ನಾವೆಲ್ಲರೂ ನೆಮ್ಮದಿ, ಸಂತೋಷದಿಂದ ಇರಬೇಕು ಎಂಬುದೇ ಆಗಿದೆ ಎಂದು ಹೇಳಿದರು.

ಇಸ್ರೊದಲ್ಲಿ ಅಧಿಕಾರಿ-ಸಿಬ್ಬಂದಿ ನಡುವೆ ಮೇಲು, ಕೀಳೆಂಬ ಬೇಧವಿಲ್ಲ. ಎಲ್ಲರೂ ಒಂದೇ ತಂಡವಾಗಿ ಕೆಲಸ ಮಾಡುವುದರಿಂದ ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಇಷ್ಟೊಂದು ಸಾಧನೆ ಮಾಡಲು ಸಾಧ್ಯವಾಗಿದೆ ಎಂದು ಹೇಳಿದರು.

ಯು.ಆರ್.ರಾವ್ ಉಪಗ್ರಹ ಕೇಂದ್ರದ ವಿಜ್ಞಾನಿ ರಾಘವೇಂದ್ರ ಬಿ.ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು. ಎನ್‌ಐಎಸ್‌ಎಆರ್ ಯೋಜನಾ ನಿರ್ದೇಶಕ ಸಿ.ವಿ. ಶ್ರೀಕಾಂತ್, ಬಿಐಇಟಿ ನಿರ್ದೇಶಕ ಪ್ರೊ.ವೈ. ವೃಷಬೇಂದ್ರಪ್ಪ, ಡಿಡಿಪಿಐ ಬಿ. ಕೊಟ್ರೇಶ್, ಪ್ರಾಂಶುಪಾಲ ಎಚ್.ಬಿ. ಅರವಿಂದ್, ಸಿ. ಆರ್.ನಿರ್ಮಲಾ, ಕೆ.ಎಂ. ನರೇಶ್ ಪಾಟೀಲ್, ಯು.ಆರ್.ರಾವ್ ಉಪಗ್ರಹ ಕೇಂದ್ರದ 15ಕ್ಕೂ ಹೆಚ್ಚು ವಿಜ್ಞಾನಿಗಳು ಭಾಗವಹಿಸಿದ್ದರು.



ದಾವಣಗೆರೆಯ ಬಿಐಇಟಿಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಇಸ್ರೋದ ರಾಮನಗೌಡ ವಿ.ನಾಡಗೌಡ ಉದ್ಘಾಟಿಸಿದರು.